info@buntsanghablr.com
buntsanghabangalore@yahoo.in





# ಸ್ನೇಹ ಚಿಂತನೆ

ಮಾಸ ಪತ್ರಿಕೆ

ಜುಲೈ 2026
ಸಂಪುಟ 22 ಸಂಚಿಕೆ 07

ಸಂಚಿಕೆ ಬೆಲೆ ರೂ. 1/–






ದಿನಾಂಕ 19.07.2026ರಂದು ನಡೆದ ಬಿ.ಎಸ್.ಆರ್.ಎನ್.ಎಸ್. ವಿದ್ಯಾನಿಕೇತನ–II ಶಾಲೆಯ ವಿದ್ಯಾರ್ಥಿನಿ ನಿಲಯ ಮತ್ತು ಭೋಜನ ಶಾಲೆ ಉದ್ಘಾಟನಾ ಸಮಾರಂಭ



ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–I, ನರ್ಸರಿ ವಿಭಾಗದ Orientation ಕಾರ್ಯಕ್ರಮ




ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ– I ವಿದ್ಯಾರ್ಥಿಗಳ ಪದಗ್ರಹಣ ಕಾರ್ಯಕ್ರಮ

## ಕೃತಜ್ಞತೆಯ ಎರಡು ವರ್ಷಗಳು–ಸೇವೆಯ ಸಾರ್ಥಕ ಪಯಣ

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
# 324, Bunts' Sangha Complex, Chord Road,
Vijayanagar, Bengaluru - 560040.
P : 080-23399323 / 23399636 | E : info@buntsanghablr.com

# DURGAPARAMESHWARI CHITS PVT. LTD.

(Govt of Karnataka Approved Chit Company)

Regd. Office: No. 228/B 2nd Floor, 55th Cross, 3rd Block, Rajajinagar, (Near Ramamandira), Bengaluru, - 560010



**MB UMESH SHETTY**
Managing Director

Mobile : 9845025921 | Website: durgaparameshwarichits.in

WEBSITE

LOCATION



Chit Fund is the oldest indigenous financial Institution in India. The term CHIT FUND is known as chit, Chittie or Kuri in different parts of the country. But its operation is same throughout the country. Chit fund is a convenient financial instrument which serves twin purposes of savings and Borrowings by a subscriber. The financial institution, ensuring safest investment, subjecting itself to the control of central and state statutes, which empowers the common man is none other than **DURGAPARAMESHWARI CHITS PVT. LTD.**

## OUR POPULAR CHITS DESIGNED ACCORDING TO YOUR NEED AND CONVENIENCE

| SL.NO. | Monthly Instalment | Period | Chit Amount |
|---|---|---|---|
| 1 | 10,000 | 30 | 3,00,000 |
| 2 | 20000 | 25 | 5,00,000 |
| 3 | 25000 | 40 | 10,00,000 |
| 4 | 50,000 | 30 | 15,00,000 |
| 5 | 50,000 | 40 | 20,00,000 |
| 6 | 70,000 | 30 | 21,00,000 |

| SL.NO. | Monthly Instalment | Period | Chit Amount |
|---|---|---|---|
| 7 | 75,000 | 40 | 30,00,000 |
| 8 | 1,00,000 | 40 | 40,00,000 |
| 9 | 1,25,000 | 40 | 50,00,000 |
| 10 | 2,00,000 | 25 | 50,00,000 |
| 11 | 2,50,000 | 40 | 1,00,00,000 |
| 12 | 5,00,000 | 40 | 2,00,00,000 |

**The Best Reliable Financial Investment Option**

Call : 080-35831843 | 9535544772 | 9845025921 | 9513005556 | 9513005557

SCAN FOR PAYMENT

ADVT.

ಬಂಟರ ಸಂಘ ಬೆಂಗಳೂರು

# ಸ್ನೇಹ ಚಿಂತನೆ

VOL - 22
JULY - 2026
ISSUE - 07

Monthly Magazine Published by
**BUNTS' SANGHA BANGALORE**

**ಸಾಹಿತ್ಯ ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌರವ ಸಂಪಾದಕರು:
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ

**ಸಹ ಸಂಪಾದಕರು:**
ಶ್ರೀ ದೀಪಕ್ ಜೆ. ಶೆಟ್ಟಿ

**ಗೌರವ ಸಲಹೆಗಾರರು:**
ಶ್ರೀ ಎಂ. ಮುರಲೀಧರ ಹೆಗ್ಡೆ
ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ ಶೆಟ್ಟಿ)
ಡಾ. ದೀಪಕ್ ಶೆಟ್ಟಿ

**ಸಂಪಾದಕೀಯ ಮಂಡಳಿ**
ಶ್ರೀಮತಿ ನಿರ್ಮಲ ಸಿ. ರೈ
ಶ್ರೀ ಪ್ರಸಾದ್ ಶೆಟ್ಟಿ ಸೀತಾನದಿ
ಶ್ರೀಮತಿ ಸ್ಮಿತಾ ಬಲ್ಲಾಳ್
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀ ಸಂದೀಪ್ ಹೆಗ್ಗದ್ದೆ
ಶ್ರೀಮತಿ ಶ್ಯಾಮಲ ಶೆಟ್ಟಿ

**ಪತ್ರಿಕಾ ಸಲಹಾ ವಿಭಾಗ:**
ಸಮಾಜ ಸೇವೆ ವಿಭಾಗ: ಶ್ರೀ ಜಯರಾಮ ಶೆಟ್ಟಿ ನೂಜಾಡಿ
ಕಾನೂನು ಸಲಹೆಗಾರರು: ಶ್ರೀಮತಿ ಸುಪ್ರೀತಾ ಕೆ. ಶೆಟ್ಟಿ
ಆರೋಗ್ಯ ಮಾಹಿತಿ ವಿಭಾಗ: ಡಾ. ಶಾಲ್ಮಲೀ ಸುರೇಶ್
ಮನೋರಂಜನಾ ವಿಭಾಗ: ಶ್ರೀಮತಿ ರೇವತಿ ಶೆಟ್ಟಿ
ಶೈಕ್ಷಣಿಕ ವಿಭಾಗ: ಶ್ರೀಮತಿ ನಂದಿನಿ ನಾಗರಾಜ್ ಶೆಟ್ಟಿ
ಕ್ರೀಡಾ ವಿಭಾಗ: ಶ್ರೀ ನವೀನ್ ಶೆಟ್ಟಿ

**ಪೋಷಕ ಸದಸ್ಯರು:**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ. ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು:**
ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ

## ಒಳ ಪುಟಗಳಲ್ಲಿ.....

| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಯವರ ವರದಿ | 4 |
| Bunts Sangha RNS Vidyaniketan-Report on Word Environment Day | 6 |
| Bunts' Sangha R.N.S Composite PU College Talents Day 2026-27 - Report | 7 |
| Bunts' Sangha R.N.S Composite PU College Investiture Ceremony 2026 - 27 - Report | 8 |
| ಬಂಟರ ಸಂಘ ಬೆಂಗಳೂರು–ಪ್ರಾರ್ಥನಾ ಮಂದಿರ ಸಮಿತಿ | 9 |

### ಮುಖ ಪುಟ

ದಿನಾಂಕ 19.07.2026ರಂದು ನಡೆದ ಬಿ.ಎಸ್.ಆರ್.ಎನ್.ಎಸ್. ವಿದ್ಯಾನಿಕೇತನ–II ಶಾಲೆಯ ವಿದ್ಯಾರ್ಥಿನಿ ನಿಲಯ ಮತ್ತು ಭೋಜನ ಶಾಲೆ ಉದ್ಘಾಟನಾ ಸಮಾರಂಭ

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–I, ನರ್ಸರಿ ವಿಭಾಗದ Orientation ಕಾರ್ಯಕ್ರಮ

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–I ವಿದ್ಯಾರ್ಥಿಗಳ ಪದಗ್ರಹಣ ಕಾರ್ಯಕ್ರಮ

ಈ ಸಂಚಿಕೆಯಲ್ಲಿ ಪ್ರಕಟವಾದ ಜಾಹೀರಾತು ಮತ್ತು ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಚಂದಾದಾರರು ಮತ್ತು ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ – ಸಂಪಾದಕ ಮಂಡಳಿ

# ಸಂಪಾದಕೀಯ



**ಕೃತಜ್ಞತೆಯ ಎರಡು ವರ್ಷಗಳು–ಸೇವೆಯ ಸಾರ್ಥಕ ಪಯಣ**

**ಆತ್ಮೀಯ ಬಂಟ ಬಂಧುಗಳೇ,**

ಜೀವನದಲ್ಲಿ ಕೆಲವು ಜವಾಬ್ದಾರಿಗಳು ಹುದ್ದೆಗಳಾಗಿ ಬರುವುದಿಲ್ಲ; ಅವು ಸಮಾಜದ ವಿಶ್ವಾಸವಾಗಿ ನಮ್ಮ ಹೆಗಲ ಮೇಲೆ ನಿಲ್ಲುತ್ತವೆ. ಅಂತಹ ಅಮೂಲ್ಯವಾದ ವಿಶ್ವಾಸವೇ 2024–26ನೇ ಸಾಲಿನ "ಸ್ನೇಹ ಚಿಂತನೆ" ಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸುವ ಅವಕಾಶ. ಈ ಗೌರವವನ್ನು ನನಗೆ ನೀಡಿದ ಬೆಂಗಳೂರು ಬಂಟರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಮಸ್ತ ಬಂಟ ಬಂಧುಗಳಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಒಂದು ಸಮಾಜದ ಮುಖವಾಣಿಯಾಗಿರುವ ಪತ್ರಿಕೆಯ ಸಂಪಾದಕರಾಗುವುದು ಕೇವಲ ಲೇಖನಗಳನ್ನು ಪ್ರಕಟಿಸುವ ಕೆಲಸವಲ್ಲ. ಅದು ಸಮಾಜದ ಇತಿಹಾಸವನ್ನು ದಾಖಲಿಸುವ, ಸಾಧಕರನ್ನು ಪರಿಚಯಿಸುವ, ಯುವಜನತೆಯನ್ನು ಪ್ರೇರೇಪಿಸುವ, ಹಿರಿಯರ ಅನುಭವವನ್ನು ಮುಂದಿನ ಪೀಳಿಗೆಗೆ ತಲುಪಿಸುವ ಮತ್ತು ಸಮಾಜದ ಚಿಂತನೆಗೆ ದಿಕ್ಕು ತೋರುವ ಜವಾಬ್ದಾರಿಯಾಗಿದೆ. ಈ ಹೊಣೆಗಾರಿಕೆಯನ್ನು ಅತ್ಯಂತ ಪ್ರಾಮಾಣಿಕತೆ ಮತ್ತು ಬದ್ಧತೆಯಿಂದ ನಿರ್ವಹಿಸಲು ನಾನು ಸದಾ ಪ್ರಯತ್ನಿಸಿದ್ದೇನೆ.

ಕಳೆದ ಎರಡು ವರ್ಷಗಳಲ್ಲಿ "ಸ್ನೇಹ ಚಿಂತನೆ" ಪತ್ರಿಕೆಯನ್ನು ಕೇವಲ ಮಾಹಿತಿಯ ಸಂಗ್ರಹವಾಗಿರದೆ, ಬಂಟ ಸಮಾಜದ ಸಾಧನೆ, ಸಂಸ್ಕೃತಿ, ಸೇವೆ ಮತ್ತು ಚಿಂತನೆಯ ಪ್ರತಿಬಿಂಬವಾಗುವಂತೆ ರೂಪಿಸಲು ಶ್ರಮಿಸಿದ್ದೇನೆ. ಸಮಾಜದ ಕಾರ್ಯಕ್ರಮಗಳು, ಸಾಧಕರ ಪರಿಚಯ, ಯುವಜನರಿಗೆ ಸ್ಪೂರ್ತಿದಾಯಕ ಲೇಖನಗಳು, ಮಹಿಳೆಯರ ಸಾಧನೆ, ಹಿರಿಯರ ಅನುಭವ, ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ದಾಖಲಿಸುವ ಮೂಲಕ ಪತ್ರಿಕೆಯನ್ನು ಪ್ರತಿಯೊಂದು ಮನೆಯ ಹೆಮ್ಮೆಯ ಪ್ರಕಟಣೆಯನ್ನಾಗಿಸುವ ಪ್ರಯತ್ನ ಮಾಡಲಾಗಿದೆ.

ನಾನು ಕಾರ್ಯಕಾರಿ ಸಮಿತಿಗೆ ಸೇರಿದ ನಂತರ, ಸಂಪಾದಕರಾಗಿ ಪತ್ರಿಕೆಯ ಗುಣಮಟ್ಟ ಹಾಗೂ ವಿನ್ಯಾಸಕ್ಕೆ ವಿಶೇಷ ಆದ್ಯತೆ ನೀಡಲಾಯಿತು. "ಸ್ನೇಹ ಚಿಂತನೆ" ಪತ್ರಿಕೆಯನ್ನು ಸಂಪೂರ್ಣ ವರ್ಣರಂಜಿತ ರೂಪದಲ್ಲಿ ಪ್ರಕಟಿಸುವ ಕನಸನ್ನು ನನಸಾಗಿಸಲು ಸಾಧ್ಯವಾದುದು ನನ್ನ ಜೀವನದ ಅತ್ಯಂತ ಹೆಮ್ಮೆಯ ಕ್ಷಣಗಳಲ್ಲಿ ಒಂದಾಗಿದೆ. ಈ ಬದಲಾವಣೆ ಕೇವಲ ಬಣ್ಣದ ಪುಟಗಳ ಬದಲಾವಣೆಯಲ್ಲ; ಅದು ನಮ್ಮ ಸಮಾಜದ ಬೆಳವಣಿಗೆ, ಹೊಸ ಚಿಂತನೆ ಮತ್ತು ಆಧುನಿಕ ದೃಷ್ಟಿಕೋನದ ಪ್ರತೀಕವಾಗಿದೆ. ಮುಂದಿನ ದಿನಗಳಲ್ಲಿ ಇ–ಪೇಪರನ್ನು ಮಾಡುವ ಯೋಚನೆಯಲ್ಲಿದ್ದು, ಅದಕ್ಕೆ ಬೇಕಾದಂತಹ ತಯಾರಿಗಳನ್ನು ಮಾಡಲಾಗಿದೆ.

ಈ ಎರಡು ವರ್ಷದ ಪಯಣದಲ್ಲಿ ನಾನು ಒಬ್ಬನೇ ನಡೆದಿಲ್ಲ. ನನ್ನೊಂದಿಗೆ ಹೆಗಲಿಗೆ ಹೆಗಲು ನೀಡಿ ನಿಂತ ಉಪಸಂಪಾದಕರು, ಗೌರವ ಸಲಹೆಗಾರರು, ಸಂಪಾದಕ ಮಂಡಳಿಯ ಸದಸ್ಯರು ಹಾಗೂ ಕಾರ್ಯಕಾರಿ ಸಮಿತಿಯ ಸರ್ವ ಸದಸ್ಯರ ಸಹಕಾರವೇ ನನ್ನ ದೊಡ್ಡ ಶಕ್ತಿಯಾಗಿತ್ತು. ಅವರ ಮಾರ್ಗದರ್ಶನ, ಅಮೂಲ್ಯ ಸಲಹೆಗಳು, ಪ್ರೋತ್ಸಾಹ ಮತ್ತು ನಿಸ್ವಾರ್ಥ ಸಹಕಾರದಿಂದಲೇ ಈ ಪತ್ರಿಕೆಯನ್ನು ಯಶಸ್ವಿಯಾಗಿ ಎರಡು ವರ್ಷಗಳ ಕಾಲ ನಡೆಸಲು ಸಾಧ್ಯವಾಯಿತು.

ಅದೇ ರೀತಿ, ಅಧ್ಯಕ್ಷರು, ಪದಾಧಿಕಾರಿಗಳು, ಲೇಖಕರು, ಜಾಹೀರಾತುದಾರರು, ಛಾಯಾಗ್ರಾಹಕರು, ವಿನ್ಯಾಸ ತಂಡ, ಮುದ್ರಣ ಸಿಬ್ಬಂದಿ ಹಾಗೂ ಪ್ರತಿಯೊಬ್ಬ ಓದುಗರಿಗೂ ನನ್ನ ಹೃದಯಪೂರ್ವಕ ಧನ್ಯವಾದಗಳು. ಈ ಸಾಧನೆ ನನ್ನೊಬ್ಬನದ್ದಲ್ಲ; ಇದು ನಮ್ಮೆಲ್ಲರ ತಂಡದ ಸಾಧನೆ.

ಒಂದು ಪತ್ರಿಕೆ ಕೇವಲ ಮಾಸಪತ್ರಿಕೆಯಲ್ಲ; ಅದು ಸಮಾಜದ ನೆನಪುಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಅಮೂಲ್ಯ ದಾಖಲೆಯಾಗಿದೆ. ಇಂದಿನ ಘಟನೆಗಳು ನಾಳೆಯ ಇತಿಹಾಸವಾಗುತ್ತವೆ. ಆ ಇತಿಹಾಸವನ್ನು ಸಾಧ್ಯವಾದಷ್ಟು ಅಚ್ಚುಕಟ್ಟಾಗಿ ದಾಖಲಿಸುವ ಸೇವೆಯನ್ನು ಮಾಡುವ ಅವಕಾಶ ನನಗೆ ದೊರೆತಿರುವುದು ನನ್ನ ಭಾಗ್ಯವೆಂದು ಭಾವಿಸುತ್ತೇನೆ.

ಈ ಎರಡು ವರ್ಷದ ಸೇವಾ ಪಯಣ ಮುಗಿದರೂ, ಬಂಟ ಸಮಾಜದ ಮೇಲಿನ ನನ್ನ ಪ್ರೀತಿ, ಬದ್ಧತೆ ಮತ್ತು ಸೇವಾ ಮನೋಭಾವ ಎಂದಿಗೂ ಮುಗಿಯುವುದಿಲ್ಲ. ಸಮಾಜದ ಅಭಿವೃದ್ಧಿ, ಶಿಕ್ಷಣ, ಸಂಸ್ಕೃತಿ, ಏಕತೆ ಮತ್ತು ಸಮಾಜಸೇವೆಯ ಕಾರ್ಯಗಳಲ್ಲಿ ಮುಂದೆಯೂ ನನ್ನಿಂದಾಗುವ ಸೇವೆ ನಿರಂತರವಾಗಿರುತ್ತದೆ.

ಕೊನೆಯದಾಗಿ, ಮತ್ತೊಮ್ಮೆ ಈ ಅಪರೂಪದ ಅವಕಾಶವನ್ನು ನೀಡಿದ ಬೆಂಗಳೂರು ಬಂಟರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ, ಉಪಸಂಪಾದಕರು, ಗೌರವ ಸಲಹೆಗಾರರು, ಸಂಪಾದಕ ಮಂಡಳಿಯ ಸದಸ್ಯರು, ಜಾಹೀರಾತುದಾರರು, ಲೇಖಕರು, ಓದುಗರು ಹಾಗೂ ಸಮಸ್ತ ಬಂಟ ಬಂಧುಗಳಿಗೆ ನನ್ನ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ನಿಮ್ಮ ಪ್ರೀತಿ ನನ್ನ ಪ್ರೇರಣೆ
ನಿಮ್ಮ ವಿಶ್ವಾಸ ನನ್ನ ಶಕ್ತಿ
ನಿಮ್ಮ ಸಹಕಾರ ನನ್ನ ಸಾಧನೆ

ಸಮಾಜದ ಬೆಳವಣಿಗೆಯೇ ನಮ್ಮ ಬೆಳವಣಿಗೆ
ಸಮಾಜದ ಗೌರವವೇ ನಮ್ಮ ಗೌರವ
ಸೇವೆ ನಿರಂತರವಾಗಿರಲಿ.... ಬಂಟ ಸಮಾಜ ಮತ್ತಷ್ಟು ಉನ್ನತಿಗೆ ಏರಲಿ

ಪ್ರೀತಿಯಿಂದ, ಕೃತಜ್ಞತೆಯಿಂದ

**ರವೀಂದ್ರ ಶೆಟ್ಟಿ ಹಟ್ಟಿಯಂಗಡಿ**
**ಸಂಪಾದಕರು**

# ಅಧ್ಯಕ್ಷರ ಮಾತು



**ಪ್ರೀತಿಯ ಬಂಟ ಬಾಂಧವರೇ,**

**“ಒಗ್ಗಟ್ಟಿನಲ್ಲಿ ಶಕ್ತಿ, ಸೇವೆಯಲ್ಲಿ ಸಾರ್ಥಕತೆ; ಸಮಾಜದ ಏಳಿಗೆಯಲ್ಲಿ ನಮ್ಮೆಲ್ಲರ ಯಶಸ್ಸು.”**

ಕಳೆದ ಎರಡು ವರ್ಷಗಳಲ್ಲಿ ನಮ್ಮ ಶಿಕ್ಷಣ ಸಂಸ್ಥೆಗಳ ಗುಣಮಟ್ಟದ ಅಭಿವೃದ್ಧಿ, ವಿದ್ಯಾರ್ಥಿಗಳ ಸುರಕ್ಷತೆ, ಸಮಗ್ರ ಬೆಳವಣಿಗೆ, ಸಂವಹನ ಕೌಶಲ್ಯ ಮತ್ತು ಆಧುನಿಕ ಶಿಕ್ಷಣಕ್ಕೆ ಆದ್ಯತೆ ನೀಡಿ ಹಲವು ಮಹತ್ವದ ಕಾರ್ಯಗಳನ್ನು ಜಾರಿಗೊಳಿಸಿದ್ದೇವೆ. ತರಗತಿಗಳಿಗೆ ಸ್ಮಾರ್ಟ್ ಬೋರ್ಡ್‌ಗಳು, ಸಿಸಿ ಕ್ಯಾಮೆರಾ ವ್ಯವಸ್ಥೆ, ಪುಟ್ಟ ಮಕ್ಕಳಿಗೆ ಸುಸಜ್ಜಿತ ಆಟದ ಮೈದಾನ, CET / KCET / JEE full-time fledged integrated course, CA Integrated Course, AI ಮತ್ತು Robotic ಶಿಕ್ಷಣದ ಪರಿಚಯ ಮಾಡಲಾಗಿದ್ದು, ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಮುದ್ರಣಾಲಯದ ಜೊತೆ “Knowledge Partner” ಆಗಿ ಕಾರ್ಯ ನಿರ್ವಹಿಸುತ್ತಿದೆ. ಇದಕ್ಕೆ ತಿಲಕವಿಟ್ಟಂತೆ ಹಲವು ವರ್ಷಗಳ ನಂತರ ಈ ವರ್ಷದ ಫಲಿತಾಂಶದಲ್ಲಿ ರಾಜ್ಯಕ್ಕೆ ರ‍್ಯಾಂಕ್ ಪಡೆದಿರುವುದು ಬಹಳ ಸಂತೋಷದ ವಿಷಯ. ಭಾಷೆ, ಕ್ರೀಡೆ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ಕೌಶಲ್ಯಗಳ ಅಭಿವೃದ್ಧಿಗಾಗಿ ವಿವಿಧ ಅಂತರ್‌ಶಾಲಾ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ನಮ್ಮ ವಿದ್ಯಾರ್ಥಿಗಳು ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಹಲವು ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಈ ಎಲ್ಲಾ ಉಪಕ್ರಮಗಳು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆ ಹಾಗೂ ಉಜ್ವಲ ಭವಿಷ್ಯಕ್ಕೆ ಭದ್ರ ಬುನಾದಿಯಾಗಿದೆ ಹಾಗೂ ಗುಣಮಟ್ಟದ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಸುಮಾರು 4500ರಿಂದ 4100ಕ್ಕೆ ಮಿತಿಗೊಳಿಸುವ ಮೂಲಕ ಸಮತೋಲನಗೊಳಿಸಲಾಗಿದೆ.

ಬಂಟರ ಸಂಘ ಆರ್.ಎನ್. ಎಸ್. ವಿದ್ಯಾನಿಕೇತನ – II ಶಾಲೆಗೆ ಅಧಿಕೃತವಾಗಿ ಸಿಬಿಎಸ್‌ಇ ಮಾನ್ಯತೆ ದೊರೆತಿರುವುದು ಹೆಮ್ಮೆಯ ವಿಷಯವಾಗಿದೆ. ಈ ಶೈಕ್ಷಣಿಕ ಸಾಧನೆಗೆ ಪೋಷಕರು ವ್ಯಕ್ತಪಡಿಸಿದ ವಿಶ್ವಾಸದ ಫಲವಾಗಿ, ಈ ವರ್ಷದ ದಾಖಲಾತಿಯಲ್ಲಿ ಸುಮಾರು 200ಕ್ಕೂ ಹೆಚ್ಚು ವಿದ್ಯಾರ್ಥಿಗಳ ಹೆಚ್ಚಳ ಕಂಡುಬಂದಿದೆ. ವಿದ್ಯಾರ್ಥಿನಿ ನಿಲಯ ಮತ್ತು ಭೋಜನಾಲಯ ಉದ್ಘಾಟನಾ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು. ಸಂಘ ಮತ್ತು ಶಾಲೆಗಳ Fixed Asset Register ವ್ಯವಸ್ಥೆಯನ್ನು ರೂಪಿಸಲಾಗುತ್ತಿದೆ. ಹೊಸ ಶಾಲಾ ಆ್ಯಪ್‌ನ್ನು ಅನುಷ್ಠಾನಗೊಳಿಸಿದ್ದು, ಇದರ ಮೂಲಕ ವಿದ್ಯಾರ್ಥಿಗಳು ಮತ್ತು ಪೋಷಕರು ಗೃಹಪಾಠ, ಹಾಜರಾತಿ, ವಿದ್ಯಾರ್ಥಿಗಳ ಮಾಹಿತಿ, ಶಾಲಾ ಶುಲ್ಕ ಪಾವತಿ ಸೇರಿದಂತೆ ಅಗತ್ಯ ಮಾಹಿತಿಗಳನ್ನು ಸುಲಭವಾಗಿ ಪಡೆಯುವ ವ್ಯವಸ್ಥೆ ಕಲ್ಪಿಸಲಾಗಿದೆ. ಜೊತೆಗೆ ಆಡಳಿತ ಮಂಡಳಿಯು Dashboard ಮೂಲಕ ಶಾಲೆಗಳ ಎಲ್ಲಾ ಪ್ರಮುಖ ಮಾಹಿತಿಯನ್ನು ತಕ್ಷಣವೇ ವೀಕ್ಷಿಸುವ ವ್ಯವಸ್ಥೆಯನ್ನೂ ಅಳವಡಿಸಲಾಗಿದೆ. ಸದಸ್ಯರಿಗೆ ಹೆಚ್ಚಿನ ಅನುಕೂಲ ಕಲ್ಪಿಸುವ ಉದ್ದೇಶದಿಂದ ಸದಸ್ಯತ್ವದ ಮಾಹಿತಿಯನ್ನು ‘ಮೊಬೈಲ್ ಆ್ಯಪ್’ ಮೂಲಕ ಡಿಜಿಟಲ್ ರೂಪದಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ. ಎಲ್ಲರೂ Play Store ನಲ್ಲಿ ಲಭ್ಯವಿರುವ ‘Bunts Sangha Bangalore’ ಆ್ಯಪ್‌ನ್ನು ಡೌನ್‌ಲೋಡ್ ಮಾಡಿಕೊಂಡು ಉಪಯೋಗಿಸುವ ಮೂಲಕ ಸಂಘದ ಆಗು–ಹೋಗುಗಳ ಬಗ್ಗೆ ಅಗತ್ಯ ಮಾಹಿತಿಯನ್ನು ಸುಲಭವಾಗಿ ಪಡೆಯಬಹುದು.

ಆಗಸ್ಟ್ 15 ಮತ್ತು 16 ರಂದು ನಿಗದಿಯಾಗಿದ್ದ ಮಹಾಸಭೆ ಮತ್ತು ಚುನಾವಣಾ ದಿನಾಂಕವನ್ನು ಮಾನ್ಯ ನ್ಯಾಯಾಲಯದ OS ನಂ. 5218/2026 ರ ಆದೇಶದ ಹಿನ್ನಲೆಯಲ್ಲಿ ಮುಂದೂಡಲಾಗಿದೆ. ಮಾನ್ಯ ನ್ಯಾಯಾಲಯದಿಂದ ಮುಂದಿನ ಆದೇಶ ಹೊರಬಂದ ನಂತರ, ಅದರನ್ವಯ ಮುಂದಿನ ದಿನಾಂಕವನ್ನು ನಿಗದಿಪಡಿಸಿ ಸದಸ್ಯರಿಗೆ ವಾರ್ಷಿಕ ವರದಿಯೊಂದಿಗೆ ತಿಳಿಸಲಾಗುವುದು.

ನಮ್ಮ ಸಂಘದ ಘನತೆಯನ್ನು ಕಾಪಾಡುವ ಉದ್ದೇಶದಿಂದ ಯಾವುದೇ ಸದಸ್ಯರ ಬಗ್ಗೆ ಮಾನಹಾನಿಕರ, ಆಕ್ಷೇಪಾರ್ಹ ಅಥವಾ ಅವಹೇಳನಕಾರಿ ವಿಷಯಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸದಂತೆ ಹಾಗೂ ಯಾವುದೇ ವಿಷಯದ ಕುರಿತು ಸ್ಪಷ್ಟೀಕರಣದ ಅಗತ್ಯವಿದ್ದಲ್ಲಿ ನೇರವಾಗಿ ಸಂಘವನ್ನು ಅಥವಾ ನನ್ನನ್ನು ಸಂಪರ್ಕಿಸಿ ಸೂಕ್ತ ಮಾಹಿತಿಯನ್ನು ಪಡೆದುಕೊಳ್ಳಬಹುದು ಎಂದು ಈ ಮೂಲಕ ಮನವಿ ಮಾಡಿಕೊಳ್ಳುತ್ತೇವೆ. ಒಗ್ಗಟ್ಟು ಮತ್ತು ಸೇವಾ ಮನೋಭಾವದೊಂದಿಗೆ ಬೆಂಗಳೂರು ಬಂಟರ ಸಂಘವು ಇನ್ನಷ್ಟು ಉನ್ನತ ಸಾಧನೆಗಳನ್ನು ಮಾಡುವಂತಾಗಲಿ ಎಂದು ಶ್ರೀ ವರಸಿದ್ಧಿ ವಿನಾಯಕನಲ್ಲಿ ಪ್ರಾರ್ಥಿಸುತ್ತೇನೆ.

**ಇಂತಿ ತಮ್ಮ ಪ್ರೀತಿಯ**

**ಸಿಎ. ಅಶೋಕ್ ಶೆಟ್ಟಿ ಎಂ.**

**ಅಧ್ಯಕ್ಷರು**

# ಗೌರವ ಕಾರ್ಯದರ್ಶಿಯವರ ವರದಿ



**ಮಾನ್ಯರೇ,**

ಸಮುದಾಯದ ಶಕ್ತಿ ಸದಸ್ಯರ ಒಗ್ಗಟ್ಟು ಮತ್ತು ಸಹಕಾರದಲ್ಲಿದೆ. ಎಲ್ಲರೂ ಒಂದಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಸಂಘವು ಪ್ರಗತಿಯತ್ತ ಸಾಗಲು ಸಾಧ್ಯ. ನೂತನ ಬೈಲಾ ತಿದ್ದುಪಡಿ ನಿಯಮಾನುಸಾರ ಪ್ರಕಟಿಸಲಾದ 2026–29ನೇ ಸಾಲಿನ ಚುನಾವಣಾ ವೇಳಾಪಟ್ಟಿಯು ಸದಸ್ಯರೆಲ್ಲರಿಗೂ ಈಗಾಗಲೇ ತಲುಪಿದೆ. ಆದರೆ ಗೌರವಾನ್ವಿತ ಸದಸ್ಯರೊಬ್ಬರು ಚುನಾವಣೆಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿರುವ ಪ್ರಕರಣದ ಮೇರೆಗೆ, ಮಾನ್ಯ ನ್ಯಾಯಾಲಯವು ಚುನಾವಣೆ ನಡೆಸಲು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಿದೆ. ಮಾನ್ಯ ನ್ಯಾಯಾಲಯದ ಮುಂದಿನ ಆದೇಶ ಬಂದ ನಂತರವಷ್ಟೇ ಮಹಾಸಭೆ ಹಾಗೂ ಚುನಾವಣೆಗೆ ಸಂಬಂಧಿಸಿದ ವಿವರಗಳನ್ನು ನೀಡಲಾಗುವುದು. ಸದಸ್ಯರೆಲ್ಲರೂ ಸಹಕರಿಸಬೇಕಾಗಿ ವಿನಂತಿ.

ದಿನಾಂಕ 19.07.2026ರಂದು ಆಯೋಜಿಸಲಾದ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ಯಲಚಗುಪ್ಪೆ ಶಾಲೆಯ ಆವರಣದಲ್ಲಿ ನೂತನವಾಗಿ ನಿರ್ಮಿಸಲಾದ ಮಹಿಳಾ ವಿದ್ಯಾರ್ಥಿನಿ ನಿಲಯ ಮತ್ತು ಭೋಜನಾ ಶಾಲೆ ಕಟ್ಟಡಗಳ ಉದ್ಘಾಟನಾ ಸಮಾರಂಭ ಹಾಗೂ ನಮ್ಮ ಸಂಘದ ಸದಸ್ಯರಿಗಾಗಿ ಹೊಸದಾಗಿ ಪರಿಚಯಿಸುತ್ತಿರುವ ಮೊಬೈಲ್ ಆ್ಯಪ್‌ನ ಅನಾವರಣ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕರ್ನಾಟಕ ಸರ್ಕಾರದ ಅಡ್ವೊಕೇಟ್ ಜನರಲ್ ಶ್ರೀ ಕೆ. ಶಶಿಕಿರಣ್ ಶೆಟ್ಟಿಯವರು ಆಗಮಿಸಿದ್ದರು, ಅತಿಥಿಗಳಾಗಿ ನಮ್ಮ ಸಂಘದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಎಂ. ಮುರಲೀಧರ ಹೆಗ್ಡೆಯವರು ಭಾಗವಹಿಸಿದ್ದರು.

ದಿನಾಂಕ 05.06.2026ರಂದು ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಆಯೋಜಿಸಲಾದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ರೋಟರಿ ಅಧ್ಯಕ್ಷರು, ವನ್ಯಜೀವಿ ಛಾಯಾಗ್ರಾಹಕ ಶ್ರೀ ವಲ್ಲೀಶಾ ಕೌಶಿಕ್‌ರವರು ಭಾಗವಹಿಸಿದ್ದರು.

ದಿನಾಂಕ 04.07.2026ರಂದು ಆಯೋಜಿಸಲಾದ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–I ನರ್ಸರಿ ವಿಭಾಗದ Orientation ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀಮತಿ ಶಿವಶ್ರೀ ತೇಜಸ್ವಿ ಸೂರ್ಯರವರು ಆಗಮಿಸಿದ್ದರು.

ದಿನಾಂಕ 06.07.2026 ರಂದು ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ– I ವಿದ್ಯಾರ್ಥಿಗಳ ಪದಗ್ರಹಣ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಿದ್ಧಾರ್ಥ ಯೂನಿವರ್ಸಿಟಿಯ ಉಪಕುಲಪತಿಗಳಾದ ಡಾ. ಬಾಲಕೃಷ್ಣ ಶೆಟ್ಟಿಯವರು ಆಗಮಿಸಿದ್ದರು.

ಸಂಘದ ಸಭಾಭವನದಲ್ಲಿ ದಿನಾಂಕ 02.08.2026ರಿಂದ 09.08.2026 ರವರೆಗೆ ಪ್ರತೀ ದಿನ ಸಂಜೆ 6.30ರಿಂದ 8.00ರವರೆಗೆ ಚಿನ್ಮಯ ಮಿಷನ್‌ನ ಸಹಯೋಗದೊಂದಿಗೆ "ಗೀತಾ ಜ್ಞಾನಯಜ್ಞ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಈ ಆಧ್ಯಾತ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ವಿನಂತಿ.

ದಿನಾಂಕ 24.05.2026ರಂದು ಸಂಘದ ಸಮಾಜ ಸೇವಾ ಸಮಿತಿ ಮತ್ತು ಸೇವಾದಳದ ವತಿಯಿಂದ 15 ಅರ್ಹ ಮಹಿಳಾ ಫಲಾನುಭವಿಗಳಿಗೆ ಹೊಲಿಗೆ ಯಂತ್ರವನ್ನು ವಿತರಿಸಲಾಯಿತು.

ಸಂಘದ ಅಧಿದೇವತೆ ವಿಘ್ನನಿವಾರಕ ಶ್ರೀ ವರಸಿದ್ಧಿ ವಿನಾಯಕನು ಸರ್ವರಿಗೂ ಆಯುರಾರೋಗ್ಯ ಭಾಗ್ಯವನ್ನಿತ್ತು ಕರುಣಿಸಲಿ.

ಇಂತಿ ತಮ್ಮ ಪ್ರೀತಿಯ
**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ


BUNTS' SANGHA
BANGALORE
BUNTS SANGHA
BANGALORE
Our App is
LIVE!
Dear Members,
As you are aware, the Bunts Sangha Bangalore App was officially launched on the 19th of July 2026.
The ANDROID version is already available for download at the APP Store by searching "Bunts Sangha Bangalore"
GET IT ON Google Play
The iOS version is already available for download on App Store (iOS) by searching "Bunts Sangha Bangalore"
Download on the App Store (iOS)
Members Can Login using their Registered Mobile Number or Membership Number
An OTP will be sent to the registered Mobile Number.
Please contact Bunts Sangha Office for Any Clarifications.
ONE COMMUNITY. ONE CONNECT.
TOGETHER WE GROW.
BUNTS' SANGHA
BANGALORE
BUNTS SANGHA
BANGALORE
One Community,
One Connect,
Together We Grow.

# Bunts Sangha RNS Vidyaniketan-Report on Word Environment Day




Report on World Environment Day Our school celebrated World Environment Day on June 5 2026 at RTB Auditorium with great enthusiasm and awareness. The program was organized for the students of Classes VIII to X from both the ICSE and CBSE streams. The event aimed to inspire students to become responsible citizens and active participants in environmental conservation.

The chief guest for the program was Mr. Vallisha Kaushik, Rotary President, renowned naturalist, wildlife photographer, and herpetologist. In his enlightening address, sir emphasized the importance of protecting and restoring the environment. Sir spoke extensively about the challenges faced by lakes in Bangalore and suggested practical measures that communities can adopt to save and rejuvenate these precious water bodies.

Sir also highlighted the significance of seed collection and preservation in educational institutions. He encouraged schools to create seed banks and involve students in conservation activities that promote biodiversity and sustainable living. His engaging presentation inspired students to understand their role in protecting nature and preserving ecological balance.

A special highlight of the program was the environmental pledge administered by the chief guest. All students enthusiastically participated and pledged to adopt eco-friendly practices, conserve natural resources, and contribute towards creating a greener and cleaner planet.

Our respected madam Principal also addressed the gathering and spoke about the numerous benefits of environmental conservation. She emphasized the need to protect natural resources, reduce pollution, and cultivate environmentally responsible habits in daily life. She encouraged students to become ambassadors of change and spread awareness about environmental protection in their homes and communities.

The celebration concluded on a positive note, leaving students motivated and empowered to take meaningful steps towards safeguarding the environment. The event served as a valuable learning experience and reinforced the importance of collective action in building a sustainable future.



## Academic Excellence - Congratulations!

### SSLC / 10th Std. Toppers

**Sharan Shetty S.**

S/o Shivananda E Shetty & Shamala V. Shetty

**CBSE - 97.6%**

**Information Tec-100**

**The Great Eastern Intl Public School, Yeshwanthpur, Bengaluru**

# Bunts' Sangha R.N.S Composite PU College
## Talents Day 2026-27 - Report

I PUC Talents Day was held on 10/07/2026 (Friday) at the RTB Auditorium. Smt. Usha Santosh, Principal, was the chief guest for the occasion.




The programme began by invoking the blessings of the Almighty. The Principal, Cultural Committee, and the elected Student Council inaugurated the programme by lighting the ceremonial lamp. An encouraging invocation dance was performed by the II PUC students.




All the sections of I PUC presented a variety of performances, including group songs, group dances, fashion shows, skits, instrumental music, and yoga. The II PUC students also entertained the audience with their performances. The performances showcased the students' talents and creativity. The winners were awarded trophies in recognition of their achievements.

The programme concluded with the singing of the National Anthem.

---

## ಅಭಿನಂದನೆಗಳು



ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ)

ಬೆಂಗಳೂರು ಬಂಟರ ಸಂಘದ ಮಾಜಿ ಉಪಾಧ್ಯಕ್ಷರಾದ ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ) ಯವರನ್ನು ರಾಜ್ಯ ಸರಕಾರವು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಅಧಿಕಾರೇತರ ಸದಸ್ಯರನ್ನಾಗಿ ಮೂರು ವರ್ಷಗಳ ಅವಧಿಗೆ ನಾಮ ನಿರ್ದೇಶನ ಮಾಡಿರುವುದು ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ. ಅಲ್ಲದೆ, ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಯೋಜನೆಗಳ ಅನುಷ್ಠಾನದ ರಾಜ್ಯ ಮಟ್ಟದ ಕಾರ್ಯಕ್ಷಮತೆಯ ಮೌಲ್ಯ ಮಾಪನ ಸಮಿತಿಯ ಸದಸ್ಯರನ್ನಾಗಿಯೂ ನೇಮಿಸಲಾಗಿದೆ. ಪ್ರಸ್ತುತ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಬೆಂಗಳೂರು ನಗರ ಜಿಲ್ಲೆಯ ಚೇರ್‌ಮೆನ್‌ರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಗೆ ಬೆಂಗಳೂರು ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

# Bunts' Sangha R.N.S Composite PU College

## Investiture Ceremony 2026 - 27
## Report

Investiture ceremony was held on 06/07/2026 (Monday) in Bunts Sangha RTB Auditorium. The Chief Guest and other dignitaries were welcomed by the school band. The programme began with an invocation dance by 10th Std CBSE students. The dignitaries were ushered to the dias by Madam Principal. Dr. Balakrishna Shetty, Vice-Chancellor of Siddhartha University and GC Member was the Chief Guest. President of Bunts Sangha Sri CA Ashok Shetty M, Hon. Secretary and Convenor Sri Vijay J. Shetty Halady, Treasurer Sri Ashok Kumar Shetty and Principal Smt. Usha Santosh were the dignitaries on the dias. Lady Vice-President Ms. Kanti Shetty and other EC members graced the occasion with their presence.



Master Daivik Nayak of 10th Std ICSE welcomed the dignitaries. Lighting of the lamp was done by the dignitaries. All the elected/selected leaders of ICSE, CBSE and College Wing were officially badged by the dignitaries.

The administration of the oath was done by Madam Principal. College Head Boy Master Kishan R delivered the acceptance speech. Treasurer Sir spoke about building leadership qualities throughout their life which would also boost confidence in them.



The introduction of the Chief Guest was done by CBSE Coordinator Ms. Pallavi Prabhakar. The Chief Guest emphasized the relevance of having confidence to face challenges in life. A brief interaction between the students and management was done wherein many questions were asked by the students of ICSE, CBSE and College stream.

The felicitation of the chief guest was done by the dignitaries. President Sir spoke about inculcating humbleness and leadership qualities in students' life. The vote of thanks was proposed by Ms. Ahana Shetty (CBSE) & Ms. Japya Gupta (ICSE). The programme came to an end with the singing of the National Anthem.

# ಬಂಟರ ಸಂಘ ಬೆಂಗಳೂರು–ಪ್ರಾರ್ಥನಾ ಮಂದಿರ ಸಮಿತಿ

## 2026ನೇ ವರ್ಷದ ಪ್ರತೀ ತಿಂಗಳ ಸಂಕಷ್ಟಹರ ಚತುರ್ಥಿಯಂದು ಅದ್ದೂರಿಯಾಗಿ ರಂಗ ಪೂಜೆ ನಡೆಸಿಕೊಟ್ಟ ಸೇವಾಕರ್ತರು;

- ಜನವರಿ : ಶ್ರೀಮತಿ ಲತಾ ಶೆಟ್ಟಿ ಮತ್ತು ಶ್ರೀ ಮಹಾಬಲ ಶೆಟ್ಟಿ
  ಶ್ರೀಮತಿ ಪದ್ಮಶ್ರೀ ರೈ ಮತ್ತು ಶ್ರೀ ರಾಜಶೇಖರ್ ರೈ
  ಶ್ರೀಮತಿ ಯೋಗ್ಯ ರೈ ಮತ್ತು ಶ್ರೀ ಲಂಬೋದರ ರೈ
- ಫೆಬ್ರವರಿ : ಶ್ರೀಮತಿ ಅಶ್ವಿನಿ ಶೆಟ್ಟಿ ಮತ್ತು ಶ್ರೀ ಹರೀಶ್ ಶೆಟ್ಟಿ
  ಶ್ರೀಮತಿ ಶಮಿತಾಲಕ್ಷ್ಮೀ
- ಮಾರ್ಚ್ : ಶ್ರೀಮತಿ ಪ್ರಜ್ಞಾ ಶೆಟ್ಟಿ ಮತ್ತು ಶ್ರೀ ಶರತ್ ಶೆಟ್ಟಿ
  ಶ್ರೀಮತಿ ಪ್ರೇಮಾ ಶೆಟ್ಟಿ ಮತ್ತು ಶ್ರೀ ಸುಧಾಕರ್ ಶೆಟ್ಟಿ
- ಎಪ್ರಿಲ್ : ಶ್ರೀಮತಿ ನಾಗರತ್ನ ಶೆಟ್ಟಿ ಮತ್ತು ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ
  ಶ್ರೀಮತಿ ಮಾಲತಿ ಶೆಟ್ಟಿ ಮತ್ತು ಶ್ರೀ ಅರುಣ್ ಕುಮಾರ್ ಶೆಟ್ಟಿ
- ಮೇ : ಕುಮಾರಿ ಹನ್ಸಿಕಾ ಆಳ್ವ ಮತ್ತು ಕುಮಾರಿ ವಾಮಿಕ ಆಳ್ವ
  ಕುಮಾರಿ ಶ್ರೀಯಾ ಆರ್. ಶೆಟ್ಟಿ
  ಶ್ರೀಮತಿ ಕಾಂತಿ ಶೆಟ್ಟಿ
- ಜೂನ್ : ಶ್ರೀಮತಿ ಸುಮನಾ ಶೆಟ್ಟಿ ಮತ್ತು ಶ್ರೀ ಸಂತೋಷ್ ಶೆಟ್ಟಿ
  ಶ್ರೀಮತಿ ರಾಜೇಶ್ವರಿ ಶೆಟ್ಟಿ ಮತ್ತು ಶ್ರೀ ಡಿ.ಬಿ. ಪ್ರತಾಪ್ ಶೆಟ್ಟಿ
  ಶ್ರೀಮತಿ ಅಶ್ವಿನಿ ಶೆಟ್ಟಿ ಮತ್ತು ಶ್ರೀ ಪ್ರಕಾಶ್ ಶೆಟ್ಟಿ
  ಶ್ರೀಮತಿ ಆತ್ಮಾರಾಮ್ ಆಳ್ವ ಮತ್ತು ಶ್ರೀ ಅಜಿತ್ ಆನಂದ್ ಶೆಟ್ಟಿ
- ಜುಲೈ : ಶ್ರೀಮತಿ ಮಂಜುಳಾ ಶೆಟ್ಟಿ ಮತ್ತು ಶ್ರೀ ಸಂತೋಷ್ ಕುಮಾರ್ ಶೆಟ್ಟಿ
  ಶ್ರೀಮತಿ ಅರ್ಚನಾ ಶೆಟ್ಟಿ ಮತ್ತು ಡಾ. ಕಿಶೋರ್ ಶೆಟ್ಟಿ
  ಡಾ. ದೀಪಕ್ ಶೆಟ್ಟಿ ಮತ್ತು ತಂಡ
  ಶ್ರೀಮತಿ ನೀತಾ ಹೆಗ್ಡೆ ಮತ್ತು ಶ್ರೀ ಸಂದೀಪ್ ಹೆಗ್ಡೆ
  ಶ್ರೀ ಆದಿತ್ಯ ಆಳ್ವ ಮತ್ತು ಆಶ್ವಿಜಾ ಶೆಟ್ಟಿ

**ರಂಗಪೂಜೆಯನ್ನು ನೀಡಿದ ಎಲ್ಲಾ ಸೇವಾಕರ್ತರಿಗೂ ಪ್ರಾರ್ಥನಾ ಮಂದಿರ ಸಮಿತಿಯ ವತಿಯಿಂದ ತುಂಬು ಹೃದಯದ ಧನ್ಯವಾದಗಳು.**



**ಸಂಘದ ಕುಣಿತ ಭಜನಾ ತರಗತಿ ಮತ್ತು ಭಜನಾ ತರಗತಿಯ ಮಕ್ಕಳಿಗೆ ದಾನಿಗಳ ನೆರವಿನಿಂದ ತಾಳಗಳನ್ನು ವಿತರಿಸಲಾಯಿತು. ಭಜನಾ ಗುರುಗಳಾದ ಶ್ರೀ ಶ್ರೀಪ್ರಸಾದ್ ಶೆಟ್ಟಿ, ಶ್ರೀ ಧರ್ಮಪ್ರಸಾದ್ ರೈ, ಶ್ರೀ ಆತ್ಮರಾಮ್ ಆಳ್ವ, ಶ್ರೀಮತಿ ಅಕ್ಷತಾ ಶೆಟ್ಟಿ ಮತ್ತು ಶ್ರೀಮತಿ ದೀಪಾ ಆರ್. ಶೆಟ್ಟಿ ಇವರುಗಳನ್ನು ಸನ್ಮಾನಿಸಲಾಯಿತು.**

**ಪ್ರಸಾದ್ ಕುಮಾರ್ ಶೆಟ್ಟಿ**
ಸಂಚಾಲಕರು, ಪ್ರಾರ್ಥನಾ ಮಂದಿರ ಸಮಿತಿ

**ಶೋಭಾ ಶೇಖ**
ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ


ಹೃತ್ಪೂರ್ವಕ
ಅಭಿನಂದನೆಗಳು
ಪ್ರತಿಷ್ಠಿತ ಸೌತ್ ಇಂಡಿಯಾ ವುಮೆನ್ ಅಚೀವರ್ಸ್
ಅವಾರ್ಡ್ 2026 ಹಾಗೂ ಕರ್ನಾಟಕ ಟಿವಿ ಲೀಡರ್
ಅವಾರ್ಡ್ 2026ರ ಕರಾವಳಿ ಮಧ್ಯ ಕರ್ನಾಟಕದ
ಬೆಸ್ಟ್ ನಾಯಕಿ
ಪ್ರಶಸ್ತಿಗೆ
ಶ್ರೀಮತಿ ಕಾಂತಿ ಶೆಟ್ಟಿ
ಇವರು ಆಯ್ಕೆಯಾಗಿರುವುದು
ಬಂಟರಿಗೆ ಹೆಮ್ಮೆಯ ವಿಷಯ!
ಸಮಾಜಸೇವೆ, ಜನಪರ ಕಾಳಜಿ
ಹಾಗೂ ನಾಯಕತ್ವದ
ಮೂಲಕ ಗುರುತಿಸಿಕೊಂಡಿರುವ ಇವರಿಗೆ ಈ ಗೌರವ
ಸಂದಿರುವುದು ಅತ್ಯಂತ ಸಂತಸದ ಸಂಗತಿ.
ನಿಮ್ಮ ಸೇವಾ ಪಯಣ ಇನ್ನಷ್ಟು ಯಶಸ್ಸುಗಳನ್ನು ಕಾಣಲಿ
ಹಾಗೂ ಸಮಾಜಕ್ಕೆ ಸ್ಫೂರ್ತಿಯಾಗಲಿ.

ADVT.

## ಸಂಘಟನಾ, ವೃತ್ತಿಪರ ಹಾಗೂ ಸಾರ್ವಜನಿಕ ಜೀವನದ ಅನುಭವ

1. **2000ರಿಂದ** ಏರ್‌ಕಾಮ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ **ವ್ಯವಸ್ಥಾಪಕ ನಿರ್ದೇಶಕರಾಗಿ** ಯಶಸ್ವಿಯಾಗಿ ಕಾರ್ಯನಿರ್ವಹಣೆ.
2. **2012ರಿಂದ** – ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿರುವ **'ನಮ್ಮ ಕುಟೀರ'** ಸ್ವಯಂಸೇವಾ ಸಂಸ್ಥೆಯ **ಸಂಸ್ಥಾಪಕ ಟ್ರಸ್ಟಿಯಾಗಿ** ಸೇವೆ.
3. **2014–2016 – ಕಾರ್ಯಕಾರಿ ಸಮಿತಿ ಸದಸ್ಯೆ**** ಹಾಗೂ **ವಿವಾಹ ವೇದಿಕೆ ಸಮಿತಿ ಅಧ್ಯಕ್ಷೆ**, ಬಂಟರ ಸಂಘ ಬೆಂಗಳೂರು.
4. **2016–2018 – ಜೊತೆ ಕಾರ್ಯದರ್ಶಿಯಾಗಿ** ಸೇವೆ ಸಲ್ಲಿಸಿದ್ದು **ಸದಸ್ಯತ್ವ ಮತ್ತು ವೆಬ್‌ಸೈಟ್ ಸಮಿತಿಯ ಅಧ್ಯಕ್ಷೆಯಾಗಿ** ಸಂಘದ ವಿಸ್ತರಣೆ ಮತ್ತು ಆಧುನೀಕರಣಕ್ಕೆ ಕೊಡುಗೆ.
5. **2016–2019** – ಕನ್ನಡ ಸಾಹಿತ್ಯ ಪರಿಷತ್ ರಾಜ್ಯ ಸಮಿತಿಯ ಸಹ ಸಂಚಾಲಕಿ (ಉದ್ಯೋಗ ಮತ್ತು ಐಟಿ ವಿಭಾಗ).
6. **ತುಳುಕೂಟ ಬೆಂಗಳೂರು, ತುಳುವರೆಂಕುಲು ಸಂಸ್ಥೆ** ಹಾಗೂ **ಕರ್ನಾಟಕ ಟೆಲಿವಿಷನ್ ಅಸೋಸಿಯೇಷನ್**ನ ಅಜೀವ ಸದಸ್ಯೆ.
7. **2019–2022 – ಕರ್ನಾಟಕ ರಾಜ್ಯ ತುಳು ಸಾಹಿತ್ಯ ಅಕಾಡೆಮಿಯ ಸದಸ್ಯೆಯಾಗಿ** ಭಾಷಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯ ಪಾತ್ರ.
8. **2019–2022 – ಕೃಷ್ಣ ಕಾವೇರಿ ಸೊಸೈಟಿಯ ನಿರ್ದೇಶಕಿಯಾಗಿ** ಆಡಳಿತಾತ್ಮಕ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ಭಾಗವಹಣೆ.
9. **ಕಳೆದ 26 ವರ್ಷಗಳಿಂದ** ಬಂಟರ ಸಂಘ ಬೆಂಗಳೂರಿನ **ಸಕ್ರಿಯ ಸದಸ್ಯೆಯಾಗಿ**, ಸಂಘದ ವಿವಿಧ ಕಾರ್ಯಕ್ರಮಗಳು, ಯೋಜನೆಗಳು ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ನಿರಂತರ ಪಾಲ್ಗೊಳ್ಳುವಿಕೆ.
10. ವಿವಿಧ ಸಾಮಾಜಿಕ, ಸಾಂಸ್ಕೃತಿಕ ಮತ್ತು ವೃತ್ತಿಪರ ಸಂಘ-ಸಂಸ್ಥೆಗಳಲ್ಲಿ ಪದಾಧಿಕಾರಿಯಾಗಿ ಸೇವೆ ಸಲ್ಲಿಸಿರುವ ಸಮೃದ್ಧ ಅನುಭವ.
11. **2024–2026 – ಬಂಟರ ಸಂಘ ಬೆಂಗಳೂರು ಉಪಾಧ್ಯಕ್ಷೆಯಾಗಿ** ಸೇವೆ ಸಲ್ಲಿಸಿ ಮಹಿಳಾ ಸಬಲೀಕರಣ ಹಾಗೂ ಸಂಘಟನಾ ಅಭಿವೃದ್ಧಿಗೆ ವಿಶೇಷ ಕೊಡುಗೆ.
12. **ಭಾರತೀಯ ಜನತಾ ಪಕ್ಷದ ಅಧಿಕೃತ ವಕ್ತಾರೆಯಾಗಿ**, ಕಳೆದ ಹಲವು ವರ್ಷಗಳಲ್ಲಿ 1,800ಕ್ಕೂ ಹೆಚ್ಚು ಟಿವಿ ನೇರ ಚರ್ಚೆಗಳಲ್ಲಿ ಪಕ್ಷವನ್ನು ಪ್ರತಿನಿಧಿಸಿರುವ ಅನುಭವ, ಸಾರ್ವಜನಿಕ ವಿಚಾರಗಳಲ್ಲಿ ಸ್ಪಷ್ಟ ಅಭಿಪ್ರಾಯ ಮತ್ತು ಪರಿಣಾಮಕಾರಿ ಸಂವಹನ ಕೌಶಲ್ಯದ ಪ್ರತಿಬಿಂಬ.

## ಸಮಾಜ ಸೇವೆಗೆ ಸಂದ ಪ್ರಶಸ್ತಿಗಳು ಮತ್ತು ಗೌರವಗಳು

1. 2018 – ಆರ್ಯಭಟ ಅಂತಾರಾಷ್ಟ್ರೀಯ ಪ್ರಶಸ್ತಿ.
2. 2019 – ತುಳುನಾಡ ಸೌಗಂಧಿಕ ಪ್ರಶಸ್ತಿ.
3. 2020 – "ಕರೋನಾ ವಾರಿಯರ್ಸ್ ಆಫ್ ಇಂಡಿಯಾ" ಪ್ರಶಸ್ತಿ (ಅರಬ್ ದೇಶದ ಚೇಂಬರ್ ಆಫ್ ಕಾಮರ್ಸ್ ವತಿಯಿಂದ).
4. 2020 – ಸ್ವಸ್ತಿಶ್ರೀ ರಾಜ್ಯ ಪ್ರಶಸ್ತಿ.
5. 2021 – ನಾರಿ ಶಕ್ತಿ ಪ್ರಶಸ್ತಿ.
6. 2021 – ಸಮಾಜ ಸೇವಾ ರತ್ನ ಪ್ರಶಸ್ತಿ.
7. 2021-22 – ಮಹಿಳಾ ವಾರಿಯರ್ ಪ್ರಶಸ್ತಿ.
8. 2022 – ಸಾಮಾಜಿಕ ಸೇವಾ ಕ್ಷೇತ್ರದಲ್ಲಿನ ವಿಶೇಷ ಕೊಡುಗೆಗಾಗಿ ಇಂಡಿಯನ್ ಎಂಪೈರ್ ಯೂನಿವರ್ಸಿಟಿ ವತಿಯಿಂದ ಗೌರವ ಡಾಕ್ಟರೇಟ್.
9. 2023 – ಅಚೀವರ್ಸ್ ಆಫ್ ಬೆಂಗಳೂರು ಅವಾರ್ಡ್ (ಟೈಮ್ಸ್ ಗ್ರೂಪ್ ವತಿಯಿಂದ).
10. 2024 – ಬೆಂಗಳೂರು ರತ್ನ ಪ್ರಶಸ್ತಿ (ವಿಜಯವಾಣಿ ಸಮೂಹ ಸಂಸ್ಥೆಯಿಂದ).
11. 2024 – ಸಮಾಜ ಸೇವಾ ರತ್ನ ಪ್ರಶಸ್ತಿ (ಕನ್ನಡ ಫಿಲಂ ಚೇಂಬರ್ (ರಿ) ವತಿಯಿಂದ).
12. 2024 – ಶೌರ್ಯ ಶಕ್ತಿ ಕರ್ನಾಟಕ ಪ್ರಶಸ್ತಿ.
13. 2025 – ನಾರಿ ಶಕ್ತಿ ಪ್ರಶಸ್ತಿ.
14. 11 ಮಾರ್ಚ್ 2026 – ಸಮಾಜ ಸೇವಾ ರತ್ನ ಪ್ರಶಸ್ತಿ.
15. 28 ಮಾರ್ಚ್ 2026 – ಉದ್ಯೋಗ ಯೋಗದಾನ ಪುರಸ್ಕಾರ ಪ್ರಶಸ್ತಿ, ಖ್ಯಾತ ಚಲನಚಿತ್ರ ನಟಿ Shilpa Shetty ಅವರಿಂದ ಪ್ರದಾನ.
16. 29 ಮಾರ್ಚ್ 2026 – ಮಹಿಳಾ ರತ್ನ ಪ್ರಶಸ್ತಿ, ಮಾಜಿ ಲೋಕಾಯುಕ್ತ ಹಾಗೂ ನ್ಯಾಯಮೂರ್ತಿ N. Santosh Hegde ಅವರಿಂದ ಪ್ರದಾನ.
17. 2026 – ಮಧ್ಯ ಕರ್ನಾಟಕ ಮತ್ತು ಕರಾವಳಿ ಕರ್ನಾಟಕ ವಿಭಾಗದ "ಬೆಸ್ಟ್ ಲೀಡರ್ ಅವಾರ್ಡ್" (ಕರ್ನಾಟಕ ಟಿವಿ ವತಿಯಿಂದ).
18. 2026 – ಸೌತ್ ಇಂಡಿಯಾ ವುಮೆನ್ ಅಚೀವರ್ಸ್ ಅವಾರ್ಡ್



ಸಮಾಜ ಸೇವಾ ಕ್ಷೇತ್ರದಲ್ಲಿ **ಕ್ರಾಂತಿಯೆಬ್ಬಿಸುತ್ತಿರುವ ಕಾಂತಿ ಶೆಟ್ಟಿ**ಯವರಿಗೆ ಮನದಾಳದ ಅಭಿನಂದನೆಗಳು

ADVT.



ADVT.

## ಬಂಟರ ಸಂಘ ಬೆಂಗಳೂರು ಮತ್ತು ಚಿನ್ಮಯ ಮಿಷನ್, ಬೆಂಗಳೂರು

ಇವರ ಸಂಯುಕ್ತ ಆಶ್ರಯದಲ್ಲಿ

# ‘ಗೀತಾಜ್ಞಾನಯಜ್ಞ’

**ಪರಮಪೂಜ್ಯ ಸ್ವಾಮೀ ಗಹನಾನಂದ ಇವರಿಂದ**

**ವಿಷಯ: ಭಗವದ್ಗೀತೆಯ ಬೆಳಕಿನಲ್ಲಿ ಕರ್ಮದ ರಹಸ್ಯ (ಗೀತೆ ಆಧಾರಿತ)**

**ದಿನಾಂಕ: 02.08.2026ರಿಂದ 09.08.2026, ಸಂಜೆ 6.30ರಿಂದ 8.00 ರವರೆಗೆ**

**ಸ್ಥಳ: ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನ**

**ಸರ್ವರಿಗೂ ಆದರದ ಸ್ವಾಗತ**

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸರ್ವ ಸದಸ್ಯರು ಬಂಟರ ಸಂಘ ಬೆಂಗಳೂರು**

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

## ಬಂಟರ ಸಂಘ ಬೆಂಗಳೂರು ಸದಸ್ಯರಿಗೆ ಪ್ರಮುಖ ಸೂಚನೆ

**ಆತ್ಮೀಯ ಸದಸ್ಯರೇ,**

ಪೂರ್ವನಿಯೋಜಿತವಾಗಿ ಆಗಸ್ಟ್ 15 ಮತ್ತು 16ರಂದು ನಡೆಯಬೇಕಿದ್ದ ಸಂಘದ ಮಹಾಸಭೆ ಮತ್ತು ಚುನಾವಣೆಗೆ ಸಂಬಂಧಿಸಿದಂತೆ, ಮತದಾರರ ಪಟ್ಟಿಯ ವಿಚಾರವಾಗಿ ಸಂಘದ ಸದಸ್ಯರೊಬ್ಬರು ಸಲ್ಲಿಸಿರುವ ಪ್ರಕರಣದ ಮೇರೆಗೆ ಮಾನ್ಯ ನ್ಯಾಯಾಲಯವು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಿರುತ್ತದೆ.

ನಮ್ಮ ಸಂಘವು ಬೈಲಾ ನಿಯಮಗಳಿಗನುಸಾರವಾಗಿ ಸಂಪೂರ್ಣವಾಗಿ ನಡೆದುಕೊಂಡಿದ್ದು, ಇದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಶೀಘ್ರದಲ್ಲೇ ಸಂಘಕ್ಕೆ ಪೂರಕವಾದ ಆದೇಶ ಸಿಗುವ ನಿರೀಕ್ಷೆಯಲ್ಲಿದ್ದೇವೆ.

ಮಾನ್ಯ ನ್ಯಾಯಾಲಯದ ನಿರ್ದೇಶನದಂತೆ ಮಹಾಸಭೆ ಹಾಗೂ ಚುನಾವಣೆಯ ಮುಂದಿನ ದಿನಾಂಕಗಳನ್ನು ಸದಸ್ಯರೆಲ್ಲರಿಗೂ ಮುಂಚಿತವಾಗಿ ತಿಳಿಸಲಾಗುವುದು. ತಮ್ಮ ಸಹಕಾರಕ್ಕೆ ಧನ್ಯವಾದಗಳು.

**ಸಹಿ/–**
**ಗೌರವ ಕಾರ್ಯದರ್ಶಿ**

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

## Bunts' Sangha Bangalore-Employment Cell

No. 324, Bunts' Sangha Complex, Vijayanagar Bangalore-560040
Tel: 23399323 / 23399636, Email: **info@buntsanghablr.com**

Invites applications for the post of

**ADMIN MANAGER**

**Requirements:** MBA / Post Graduate with excellent communication skills (Verbal /Written) and 6 to 8 years of experience in Administration, preference would be given for the candidate from the Facility Management Industry.

Application with all the relevant details may be forwarded to the Hon. Secretary before 31.08.2026.

**Sd/-**
**Hon. Secretary**

| Auditorium Booking Status as on 31.07.2026 | | | | | |
|---|---|---|---|---|---|
| **Sl. No.** | **Booking date** | **Prog. date** | **Party name** | **Booking Category** | **Prog. Details** |
| | | | | **Member/Non Member** | |
| 1 | 11.06.2026 | 21.06.2026 | Rajashekar Ganiger | Non Member | Social service |
| 2 | 18.06.2026 | 29.06.2026 | Yellure Dayananda Shetty (Mallika D Shetty) | Member | Uttarakriye |
| 3 | 03.07.2026 | 06.09.2026 | The SSK Co-operative society Ltd | Non Member | Social service |
| 4 | 03.07.2026 | 18.07.2026 | The Kingdom PU College | Non Member | Social service |
| 8 | 03.07.2026 | 03.07.2026 | Praveenchandra Shetty | Member | Members |
| 9 | 07.07.2026 | 21.10.2026 | Jayakar Shetty | Member | Members |
| 10 | 13.07.2026 | 27.09.2026 | Tulunada Javaner Bangalore ® | Non Member | Coastal & Cultural |
| 11 | 16.07.2026 | 20.07.2026 | Rajashekar Ganiger | Non Member | Social service |
| 12 | 17.07.2026 | 22.07.2026 | Sri. Kaginele mahasamsthana kanaka gurupeeta | Non Member | Social service |
| 13 | 21.07.2026 | 20.09.2026 | Nadavara Samaja Bangalore | Non Member | Social service |
| 14 | 22.07.2026 | 14.11.2026 | Ajith Kumar Shetty | Member | Members |
| 15 | 23.07.2026 | 11.10.2026 | Samrruddhi Welness Center (India) Pvt. Ltd | Non Member | Social service |
| 16 | 23.07.2026 | 23.08.2026 | Omkrishna N N | Non Member | Beegara oota |
| 17 | 25.07.2026 | 04.12.2026 | Amogh B shetty | Member | Members |
| 18 | 27.07.2026 | 26.09.2026 | Rajaksh Ventures Pvt. Ltd | Non Member | Social service |
| 19 | 28.07.2026 | 06.08.2026 | Pooja P Shetty | Member | Uttarakriye |
| 20 | 30.07.2026 | 22.11.2026 | Karnataka Marati Sangha Regd. | Non Member | Social service |

**Note:-**

1. Sri P. G. Suryanarayana Bhat had booked the Auditorium for 21.09.2026. However, due to personal reasons, the booking has been cancelled at his request.
2. Sri Rajarajeshwari Sahasrarjuna Jayanthi had booked the Auditorium for 15.11.2026. Due to personal reasons, the booking has been postponed to 27.12.2026.

"ಸಹಕಾರ ಮಾಣಿಕ್ಯ"

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ.**

ESTD: 1994

ಕೇಂದ್ರ ಕಛೇರಿ: 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್,
ಮಂಗಳೂರು-575 003. ಫೋನ್: 2492275

Website: www.ramakrishnacredit.com E-mail: ho@ramakrishnacredit.com



ದಿನಾಂಕ 17.06.2026ರಂದು ಸಂಘದ ಪಡೀಲ್ ಮಂಗಳೂರು ಸ್ಥಳಾಂತರಿತಗೊಂಡ ಶಾಖೆಯನ್ನು ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಉದ್ಘಾಟಿಸಿದರು.

ಅಪರ ಜಿಲ್ಲಾಧಿಕಾರಿ ರಾಜು ಕೆ., ಸಹಕಾರ ಸಂಘಗಳ ಉಪನಿಬಂಧಕ ಎಚ್.ಎನ್. ರಮೇಶ್, ಸಂಘದ ಅಧ್ಯಕ್ಷ ಕೆ. ಜೈರಾಜ್ ಬಿ. ರೈ ಮತ್ತಿತರರು ಉಪಸ್ಥಿತರಿದ್ದರು

ಉದ್ಘಾಟಕರಾದ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಶ್ರೀ ದರ್ಶನ್ ಎಚ್. ವಿ., ಐ.ಎ.ಎಸ್ ರವರು ತಮ್ಮ ಉದ್ಘಾಟನಾ ಭಾಷಣದಲ್ಲಿ, ನಮ್ಮ ಕಛೇರಿ ಸಂಕೀರ್ಣದಲ್ಲಿ ಬ್ಯಾಂಕುಗಳ ಹಾಗೆಯೇ ಜನಸಾಮಾನ್ಯರಿಗೆ ಆರ್ಥಿಕ ಸವಲತ್ತುಗಳನ್ನು ನೀಡಿ ಜನರ ಆರ್ಥಿಕ ಅಭ್ಯುದಯಕ್ಕೆ ಕೊಡುಗೆಯನ್ನು ನೀಡುತ್ತಿರುವ ಸಹಕಾರ ಸಂಘಗಳಿಗೆ ಅವಕಾಶ ನೀಡಬೇಕು ಎಂಬ ನಿಟ್ಟಿನಲ್ಲಿ ಸಹಕಾರಿ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಶ್ರೀ ರಾಮಕೃಷ್ಣ ಸೊಸೈಟಿಗೆ ಅವಕಾಶ ಕಲ್ಪಿಸಲಾಗಿದೆ. ಶ್ರೀ ರಾಮಕೃಷ್ಣ ಸೊಸೈಟಿಯು ಹೆಚ್ಚು ಹೆಚ್ಚು ವಹಿವಾಟುಗಳನ್ನು ಮಾಡಿ ಇನ್ನಷ್ಟು ಅಭಿವೃದ್ಧಿಯನ್ನು ಕಾಣಲಿ ಎಂದು ಹಾರೈಸಿದರು.

ಸಭೆಯ ಮುಖ್ಯ ಅಭ್ಯಾಗತರಾಗಿ ದಕ್ಷಿಣ ಕನ್ನಡ ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಶ್ರೀ ರಾಜು ಕೆ., ಕೆ.ಎ.ಎಸ್, ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಎಚ್. ಎನ್. ರಮೇಶ್, ಕೆ.ಎ.ಎಸ್, ಮತ್ತು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ಹಾಗೂ ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿ ಜಯಪಾಲ ಶೆಟ್ಟಿ ಮತ್ತು ಸಂಘದ ನಿರ್ದೇಶಕರುಗಳಾದ ಶ್ರೀ ಕೆ. ಸೀತಾರಾಮ ರೈ ಸವಣೂರು, ಶ್ರೀ ಪಿ. ಶಿವರಾಮ ಅಡ್ಯಂತಾಯ, ಶ್ರೀ ವಿಠಲ ಪಿ. ಶೆಟ್ಟಿ, ಶ್ರೀ ಪಿ. ಬಿ. ದಿವಾಕರ ರೈ, ಶ್ರೀ ಕುಂಬ್ರ ದಯಾಕರ ಆಳ್ವ, ಶ್ರೀ ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿ, ಶ್ರೀ ಅರಿಯಡ್ಕ ಚಿಕ್ಕಪ್ಪ ನಾಯಕ್ ಹಾಗೂ ಡಾ| ಬಿ. ಸಂಜೀವ ರೈಯವರು ಹಾಗೂ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ. ಕೆ.ರವರು ಉಪಸ್ಥಿತರಿದ್ದರು.

ADVT.

## ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ 2024-26

"ಮಕ್ಕಳ ಯಕ್ಷಗಾನ ತರಬೇತಿ"
"ಮಹಿಳೆಯರ ಯಕ್ಷಗಾನ ತರಬೇತಿ"
"ಪುರುಷರ ಯಕ್ಷಗಾನ ತರಬೇತಿ" ಹಾಗೂ
"ಮಕ್ಕಳ ರಂಗತರಬೇತಿ" ತರಗತಿ

2026-27ನೇ ಸಾಲಿನ ಯಕ್ಷಗಾನ ಹಾಗೂ ರಂಗತರಬೇತಿ ತರಗತಿಗಳು ಪ್ರಾರಂಭಗೊಂಡಿದ್ದು, ಆಸಕ್ತರು ದಿನಾಂಕ 31.08.2026, ಸೋಮವಾರದ ಒಳಗೆ ಬಂಟರ ಸಂಘದ ಕಛೇರಿಯಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

**ಸ್ಥಳ: ಬಂಟರ ಸಂಘ ವಿಜಯನಗರ, ಬೆಂಗಳೂರು**

**ಎಲ್ಲರೂ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಿ**

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿಎ. ಅಶೋಕ್ ಶೆಟ್ಟಿ ಎಂ**
ಅಧ್ಯಕ್ಷರು

**ಚರಣ್‌ರಾಜ್ ಶೆಟ್ಟಿ**
ಸಂಚಾಲಕರು
ಮೊ: 9008973945

**ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ**

**ಶ್ರೀ ಮೂಡುಬಗೆ ಸಂತೋಷ್ ಕುಮಾರ್ ಶೆಟ್ಟಿ**
ಚೇರ್‌ಪರ್ಸನ್
ಮೊ: 9480333938

# ಶ್ರದ್ಧಾಂಜಲಿ

| | |
|---|---|
| <br>**ಮಲ್ಲಿಕಾ ಡಿ. ಶೆಟ್ಟಿ**<br>ಸದಸ್ಯತ್ವ ಸಂಖ್ಯೆ: CL007902 | ಕಡೆಕಾರ್ ದಿ. ಸುಂದರ್ ಶೆಟ್ಟಿ ಮತ್ತು ಶಿರ್ವ ನಡಿಬೆಟ್ಟು ದಿ. ವಾರಿಜಾ ಹೆಗ್ಡೆ ಇವರ ಪುತ್ರಿ ಹಾಗೂ ಎಳ್ಳೂರು ಡಾ. ದಯಾನಂದ ಶೆಟ್ಟಿ ಇವರ ಧರ್ಮಪತ್ನಿಯಾದ ಮಲ್ಲಿಕಾ ಡಿ. ಶೆಟ್ಟಿಯವರು ದಿನಾಂಕ 16.06.2026 ರಂದು ದೈವಾಧೀನರಾಗಿರುತ್ತಾರೆ. ಇವರು ಇಬ್ಬರು ಪುತ್ರರು, ಸೊಸೆ, ಇಬ್ಬರು ಮೊಮ್ಮಕ್ಕಳು, ಇಬ್ಬರು ಸಹೋದರರು, ಓರ್ವ ಸಹೋದರಿ, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ. |
| <br>**ನಾರಾಯಣ ಶೆಟ್ಟಿ ಸಿ.**<br>ಸದಸ್ಯತ್ವ ಸಂಖ್ಯೆ: CL006526 | ಕುಂಜಾಡಿ ಶಿರೂರುಮನೆ ದಿ. ಅಂಜಪ್ಪ ಶೆಟ್ಟಿ ಮತ್ತು ಗುಡಿಚೆರಿ ಗ್ರಾಮ ದಿ. ಲಕ್ಷ್ಮಮ್ಮ ಶೆಟ್ಟಿ ಇವರ ಪುತ್ರ ನಾರಾಯಣ ಶೆಟ್ಟಿ ಸಿ. ಯವರು ದಿನಾಂಕ 20.06.2026 ರಂದು ತಮ್ಮ 80ನೇ ವಯಸ್ಸಿನಲ್ಲಿ ದೈವಾಧೀನರಾಗಿರುತ್ತಾರೆ. ಇವರು ತಮ್ಮ ಪತ್ನಿ ಇರ್ಮಾಡಿ ಶ್ರೀಮತಿ ಶೈಲಾ ಎನ್. ಶೆಟ್ಟಿ, ಇಬ್ಬರು ಪುತ್ರಿಯರು, ಅಳಿಯಂದಿರು, ಮೂವರು ಮೊಮ್ಮಕ್ಕಳು, ನಾಲ್ವರು ಸಹೋದರರು, ಮೂವರು ಸಹೋದರಿಯರು, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ. |
| <br>**ಡಾ. ರಾಜೀವ ಶೆಟ್ಟಿ ಎನ್.**<br>ಸದಸ್ಯತ್ವ ಸಂಖ್ಯೆ: CL000525 | ಬ್ರಹ್ಮಾವರ ದಿ. ರಾಮಣ್ಣ ಶೆಟ್ಟಿ ಮತ್ತು ನೈಲಾಡಿ ದಿ. ಅಕ್ಕಯ್ಯ ಶೆಟ್ಟಿ ಇವರ ಪುತ್ರ ಡಾ. ರಾಜೀವ ಶೆಟ್ಟಿ ಎನ್. ರವರು ದಿನಾಂಕ 24.06.2026 ರಂದು ತಮ್ಮ 93ನೇ ವಯಸ್ಸಿನಲ್ಲಿ ದೈವಾಧೀನರಾಗಿರುತ್ತಾರೆ. ಇವರು ತಮ್ಮ ಪತ್ನಿ ಕೊಳ್ಕೆಬೈಲು ಶ್ರೀಮತಿ ಜಯಲಕ್ಷ್ಮಿ ಆರ್. ಶೆಟ್ಟಿ, ನಾಲ್ವರು ಪುತ್ರರು, ಸೊಸೆಯಂದಿರು, ಆರು ಮೊಮ್ಮಕ್ಕಳು, ಓರ್ವ ಸಹೋದರ, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ. |
| <br>**ಪ್ರಶಾಂತ್ ಹೆಗ್ಡೆ ಬಿ.**<br>ಸದಸ್ಯತ್ವ ಸಂಖ್ಯೆ: PL000490 | ಒಂತಿಬೆಟ್ಟು ದಿ. ರತ್ನಾಕರ್ ಹೆಗ್ಡೆ ಮತ್ತು ಬನ್ನಂಪಳ್ಳಿ ದಿ. ಸುಲೋಚನ ಹೆಗ್ಡೆ ಇವರ ಪುತ್ರ ಪ್ರಶಾಂತ್ ಹೆಗ್ಡೆ ಬಿ. ಯವರು ದಿನಾಂಕ 24.06.2026 ರಂದು ತಮ್ಮ 77ನೇ ವಯಸ್ಸಿನಲ್ಲಿ ದೈವಾಧೀನರಾಗಿರುತ್ತಾರೆ. ಇವರು ತಮ್ಮ ಪತ್ನಿ ಮುಲ್ಕಿ ಶ್ರೀಮತಿ ಡಾ. ಶೆರೀನ್ ಹೆಗ್ಡೆ, ಓರ್ವ ಪುತ್ರಿ, ಓರ್ವ ಪುತ್ರ, ಅಳಿಯ, ಇಬ್ಬರು ಮೊಮ್ಮಕ್ಕಳು, ಓರ್ವ ಸಹೋದರಿ, ಇಬ್ಬರು ಸಹೋದರರು, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ. |
| <br>**ಚಂದ್ರಶೇಖರ್ ಶೆಟ್ಟಿ ಟಿ.**<br>ಸದಸ್ಯತ್ವ ಸಂಖ್ಯೆ: LM000132 | ಅಸೋಡು ದಿ. ನಾರಾಯಣ ಶೆಟ್ಟಿ ಮತ್ತು ತೊಂಬತ್ತು ದಿ. ಪುಟ್ಟಮ್ಮ ಶೆಟ್ಟಿ ಇವರ ಪುತ್ರ ಚಂದ್ರಶೇಖರ್ ಶೆಟ್ಟಿ ಟಿ. ಯವರು ದಿನಾಂಕ 29.06.2026 ರಂದು ತಮ್ಮ 83ನೇ ವಯಸ್ಸಿನಲ್ಲಿ ದೈವಾಧೀನರಾಗಿರುತ್ತಾರೆ. ಇವರು ತಮ್ಮ ಪತ್ನಿ ಶಿರೂರು ಶ್ರೀಮತಿ ಮಾಲತಿ ಸಿ. ಶೆಟ್ಟಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ನಾಲ್ವರು ಮೊಮ್ಮಕ್ಕಳು, ನಾಲ್ವರು ಸಹೋದರಿಯರು, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ. |

| | |
|---|---|
|  **ಮನೋಜ್ ಶೆಟ್ಟಿ** ಸದಸ್ಯತ್ವ ಸಂಖ್ಯೆ: CL013110 | ಕುಕ್ಕಿಕಟ್ಟೆ ದಿ. ಡಾ. ಟಿ. ಎನ್. ಭಾಸ್ಕರ್ ಶೆಟ್ಟಿ (ಶಾರದಾ ನರ್ಸಿಂಗ್ ಹೋಮ್, ಕರ್ಕಿ ಹೊನ್ನಾವರ) ಮತ್ತು ಹಂದಾಡಿ ಪಾಲ್ತಮನೆ ಶ್ರೀಮತಿ ಶೈಲಾ ಬಿ. ಶೆಟ್ಟಿ ಇವರ ಪುತ್ರ ಮನೋಜ್ ಶೆಟ್ಟಿಯವರು ದಿನಾಂಕ 29.06.2026 ರಂದು ತಮ್ಮ 53ನೇ ವಯಸ್ಸಿನಲ್ಲಿ ದೈವಾಧೀನರಾಗಿರುತ್ತಾರೆ. ಇವರು ತಮ್ಮ ಪತ್ನಿ ಪಿಲಾರ್ ಕೋನಾಲ್ ಮನೆ ಶ್ರೀಮತಿ ಅಕ್ಷತಾ ಶೆಟ್ಟಿ, ಓರ್ವ ಪುತ್ರಿ, ಓರ್ವ ಸಹೋದರ, ಓರ್ವ ಸಹೋದರಿ, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ. |
|  **ಸುಜಾತ ಟಿ. ಶೆಟ್ಟಿ** ಸದಸ್ಯತ್ವ ಸಂಖ್ಯೆ: CL004442 | ಕೊರಂಗಪಾಡಿ ದಿ. ಯೆಚ್ಚಣ್ಣ ಶೆಟ್ಟಿ ಮತ್ತು ಕಾಪು ಕಲ್ಯಾಲಬೀಡು ದಿ. ಅಕ್ಕಣಿ ಶೆಟ್ಟಿ ಇವರ ಪುತ್ರಿ ಹಾಗೂ ಕನ್ಯಾನ ಪಂಜಾಜೆ ಶ್ರೀ ತ್ಯಾಂಪಣ್ಣ ಶೆಟ್ಟಿ ಇವರ ಧರ್ಮಪತ್ನಿಯಾದ ಸುಜಾತ ಟಿ. ಶೆಟ್ಟಿಯವರು ದಿನಾಂಕ 08.07.2026 ರಂದು ದೈವಾಧೀನರಾಗಿರುತ್ತಾರೆ. ಇವರು ಓರ್ವ ಪುತ್ರ, ಸೊಸೆ, ಮೊಮ್ಮಗಳು, ಮೂವರು ಸಹೋದರರು, ಇಬ್ಬರು ಸಹೋದರಿಯರು, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ. |
|  **ಕೆ. ಪ್ರಭಾಕರ ಶೆಟ್ಟಿ** ಸದಸ್ಯತ್ವ ಸಂಖ್ಯೆ: CL003077 | ಗುಡೆಬೆಟ್ಟು ದೊಡ್ಡಮನೆ ದಿ. ಹಿರಿಯಣ್ಣ ಶೆಟ್ಟಿ ಮತ್ತು ಕಾಡೂರು ದೊಡ್ಡಮನೆ ದಿ. ನರಸಮ್ಮ ಶೆಡ್ತಿ ಇವರ ಏಕೈಕ ಪುತ್ರ ಕಾಡೂರು ದೊಡ್ಡಮನೆ ಪ್ರಭಾಕರ ಶೆಟ್ಟಿಯವರು ದಿನಾಂಕ 18.07.2026 ರಂದು ತಮ್ಮ 86ನೇ ವಯಸ್ಸಿನಲ್ಲಿ ದೈವಾಧೀನರಾಗಿರುತ್ತಾರೆ. ಇವರು ತಮ್ಮ ಪತ್ನಿ ಗುಡೆಬೆಟ್ಟು ದೊಡ್ಡಮನೆ ಶ್ರೀಮತಿ ಪಾರ್ವತಿ ಪಿ. ಶೆಟ್ಟಿ, ಮೂವರು ಪುತ್ರಿಯರು, ಇಬ್ಬರು ಪುತ್ರರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮಗ, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ. |

## ಬಂಟರ ಸಂಘ ಬೆಂಗಳೂರು
## BUNTS' SANGHA BANGALORE

**ಮಾನ್ಯ ಸದಸ್ಯರೇ,**

ನಮ್ಮ ಹಿರಿಯರು ಸಮುದಾಯ ಸದಸ್ಯರ ಏಳಿಗೆಗಾಗಿ ಸ್ಥಾಪಿಸಿದಂತಹ ಬೆಂಗಳೂರು ಬಂಟರ ಸಂಘದ ಘನತೆ-ಗೌರವವನ್ನು ಕಾಪಾಡುವುದು ಸದಸ್ಯರೆಲ್ಲರ ಜವಾಬ್ದಾರಿಯಾಗಿದೆ. ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಿರ್ಧರಿಸಿದಂತೆ ಸಂಘದ ಬಗ್ಗೆ, ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಅಥವಾ ಯಾವುದೇ ಸದಸ್ಯರ ಬಗ್ಗೆ ಮಾನಹಾನಿಕಾರಕ, ಆಕ್ಷೇಪಾರ್ಹ ಅಥವಾ ಸಂಘದ ಅವಹೇಳನಕಾರಿ ವಿಷಯಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಬಾರದು. ಇಂತಹ ಕೃತ್ಯಗಳು ಕಂಡುಬಂದಲ್ಲಿ, ಸಂಬಂಧಪಟ್ಟವರ ವಿರುದ್ಧ ಸಂಘವು ನಿಯಮಾನುಸಾರ ಹಾಗೂ ಕಾನೂನುಬದ್ಧ ಕ್ರಮ ಕೈಗೊಳ್ಳಲಿದೆ.

ಸಂಘಕ್ಕೆ ಸಂಬಂಧಿಸಿದ ಎಲ್ಲಾ ವಿಚಾರಗಳನ್ನು ಸಂಘದ ವ್ಯಾಪ್ತಿಯಲ್ಲಿಯೇ ಚರ್ಚಿಸಿ, ಸೌಹಾರ್ದಯುತವಾಗಿ ಪರಿಹಾರ ಕಂಡುಕೊಳ್ಳೋಣ. ಸಂಘದ ಘನತೆ, ಗೌರವ ಹಾಗೂ ನಮ್ಮ ಸಮುದಾಯದ ಪ್ರತಿಷ್ಠೆಯನ್ನು ಕಾಪಾಡುವುದು ಪ್ರತಿಯೊಬ್ಬ ಸದಸ್ಯರ ಜವಾಬ್ದಾರಿಯಾಗಿದೆ. ಎಲ್ಲಾ ಸದಸ್ಯರು ಸಹಕರಿಸಬೇಕಾಗಿ ವಿನಂತಿ.

ಸಹಿ/-

**ಗೌರವ ಕಾರ್ಯದರ್ಶಿ**

# ಬೆಂಗಳೂರಿನಲ್ಲಿ ಆಗಸ್ಟ್ 9 ಕ್ಕೆ ಜೈ ತುಲುನಾಡ್ ಬೆಂಗಳೂರು (ರಿ.) ವತಿಯಿಂದ ತುಲುನಾಡ ಆಟಿ.




ಜೈ ತುಲುನಾಡ್ ಬೆಂಗಳೂರು (ರಿ.) ಸಂಘಟನೆಯ ನೇತೃತ್ವದಲ್ಲಿ ತಾರೀಖು 9 ಆಗಸ್ಟ್ 2026ನೇ ಭಾನುವಾರದಂದು ಬೆಂಗಳೂರಿನ ಬಿಳೇಕಹಳ್ಳಿಯಲ್ಲಿರುವ ಮುಲ್ಕಿ ಸುಂದರ್ ರಾಮ್ ಶೆಟ್ಟಿ ಸಭಾಂಗಣದಲ್ಲಿ "ತುಲುನಾಡ ಆಟಿ-2026" ಎಂಬ ತುಳುನಾಡಿನ ಆಟಿಯ ದಿನಗಳನ್ನು ನೆನಪಿಸುವ ಅದ್ಧೂರಿ ಕಾರ್ಯಕ್ರಮ ನಡೆಯಲಿದೆ.

ಆ ದಿನ ಬೆಳಗ್ಗೆ 7:15 ಕ್ಕೆ ಬಿಳೇಕಹಳ್ಳಿಯ ಅಯ್ಯಪ್ಪ ಸ್ವಾಮಿಯ ಸನ್ನಿಧಾನದಲ್ಲಿ ಪ್ರಾರ್ಥಿಸಿ, ಬೆಳಿಗ್ಗೆ 7.30ಕ್ಕೆ ಅಯ್ಯಪ್ಪ ಸನ್ನಿಧಾನದಿಂದ ಎಂ.ಎಸ್.ಆರ್.ಎಸ್ ಸಭಾಂಗಣದವರೆಗೆ "ತುಲು ದಿಬ್ಬಣ" ಮೆರವಣಿಗೆ ನಡೆಯಲಿದೆ. ಬೆಳಿಗ್ಗೆ 8:15ಕ್ಕೆ ಕಾರ್ಯಕ್ರಮ ಉದ್ಘಾಟನೆಗೊಂಡು ಸಭಾ ಕಾರ್ಯಕ್ರಮ ನಡೆಯಲಿದೆ, ನಂತರ ವಿವಿಧ ಆಟೋಟ ಸ್ಪರ್ಧೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಯಲಿದೆ. ಮಧ್ಯಾಹ್ನದ ಹೊತ್ತಿಗೆ ಆಟಿಯ ವಿಶೇಷ ಊಟದ ವ್ಯವಸ್ಥೆ ಇರುತ್ತದೆ.

ಸಂಜೆ 4:30ರ ಸುಮಾರಿಗೆ ಆಯ್ದ ಸಾಧಕರಿಗೆ ಸನ್ಮಾನ ಕಾರ್ಯಕ್ರಮವಿರುತ್ತದೆ. ಇದೇ ಸಂದರ್ಭ ತುಲು ಲಿಪಿ ಪರೀಕ್ಷೆಯ ಪ್ರಮಾಣ ಪತ್ರ ವಿತರಣೆ ಹಾಗೂ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣಾ ಸಮಾರಂಭ ನಡೆಯಲಿದೆ ಎಂದು ಕಾರ್ಯದರ್ಶಿಗಳಾದ ಅಕ್ಷಯ್ ಆಚಾರ್ಯ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿರುವ ತುಳುನಾಡಿಗರಿಗಾಗಿ ಆಯೋಜಿಸಿರುವ ಈ ಕಾರ್ಯಕ್ರಮಕ್ಕೆ ಸಮಸ್ತ ತುಳುವರ ಸಹಕಾರವನ್ನು ಕೋರುತ್ತಿದ್ದೇವೆ ಎಂದು ಜೈ ತುಲುನಾಡ್ ಬೆಂಗಳೂರು (ರಿ.) ಸಂಸ್ಥೆಯ ಗೌರವ ಸಲಹೆಗಾರರಾದ ನಿಧೀಶ್ ಶೆಟ್ಟಿ ತಿಳಿಸಿದರು. ಅಧ್ಯಕ್ಷರಾದ ವಿನಯ್ ಮಣಿಯಾನ ಮಾತನಾಡಿ "ಉದ್ಯೋಗ ವ್ಯವಹಾರದ ನಿಮಿತ್ತ ದೂರದ ಬೆಂಗಳೂರಿನಲ್ಲಿ ನೆಲೆಸಿರುವ ತುಳುನಾಡಿನ ಎಲ್ಲಾ ಜನತೆಗೆ ತಮ್ಮ ಊರಿನ ಸೊಗಡನ್ನು ಹಾಗೂ ವಿವಿಧ ಖಾದ್ಯಗಳನ್ನು ಆನಂದಿಸಲು ಇದೊಂದು ಉತ್ತಮ ಅವಕಾಶ. ತಾವೆಲ್ಲರೂ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿ ಮಾಡಿ ಕೊಡಬೇಕು" ಎಂದು ಮನವಿ ಮಾಡಿಕೊಂಡಿದ್ದಾರೆ.

ADVT.




## 8N/09 Days Package Tour to


# Exotic Vietnam


## From 14th November to 23rd November 2026

- **Sightseeing:**
- Visit Ba Dinh Square - the Biggest Square in Hanoi
- Visit the Hoani Kiem Lake & enjoy the water Puppet Show
- Enjoy 1 Nt in 5 Star Halong Bay Cruise- Enjoy all Cruise activities
- Visit Bay Mau Coconut Forest by Basket Boat
- Enjoy the Cable Car to the Summit of mountains
- Visit Ba Na hills with many different attractions - Funicular Ride, Le Jardin D'Amour Lin Ung Pagoda, Thick Ca Buddhist Statue etc.
- Enjoy city tour of Hochi minh city
- Visit Ho Chi Minh Mausoleum, Fish pond & one pillar pagoda
- Visit to War Remnants Museum, Reunification palace, Ben Thanh market etc
- Enjoy visit to Cu Chi Tunnels, My Tho - the Homeland of coconut factories, Vin Trang Pagoda









**COST INCLUSIONS :** To & Fro Economy class air tickets from Mumbai to Hanoi, Hanoi to Da Nong, Da Nong to Saigon & Saigon to Mumbai, 1 nt Accommodation in Hanoi with early check in for previous night, 1 nt in 5 star Halong Bay Cruise, 3 Nts in Da Nang, 3 Nts in Hochimin city, all lunches and dinners in Indian / local restaurants, all sight seeing by 40 seater A/C coach. *Cost does not include : All expenses of personal nature*

Please note that the rates are subject to change based on the prevailing USD exchange rate (ROE) at the time of your final payment. The current rates have been calculated using a USD exchange rate of Rs. 97.

**Cost : Rs. 142000/-** plus 2% TCS (Refundable)- Ex Mumbai

For any further details please contact:

IATA Approved

Canara Tours & Travels Pvt. Ltd

....... good people to travel with

**Mr. S. B. Shetty - 9820510043 E-mail : sbshetty@canaratravels.com**
**Mr. T. T. Mada – 9820632934**
2, Srishti Complex, Opp. L & T Gate No.7, Saki Vihar Rd., Powai, Mumbai-72. **Tel. : (022) 42215000**
**Website : www.canaratravels.com**

**Mr. Mohan - Mob No. 9980248449**
G/3, Inland Ornate Opp. Ocean Pearl, Navabharath Circle, Kodialbail, Mangalore-575003 Tel.: 0824-4258505/06

**Mr. Prabhat Shetty - 9481950340** (Manipal)

ADVT.

ಸ್ಥಾಪನೆ: 1997

ದೂರವಾಣಿ : 080-23393444
ಮೊಬೈಲ್ : 87220 06082

## ವಿಜಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿ.,
## Vijaya Souharda Credit Co Operative Society Ltd.,

ನಂ.5, ಎಸ್.ಜೆ. ಎಲಿಗೆನ್ಸ್, 4ನೇ ಮಹಡಿ, ಚಂದ್ರ ಲೇಔಟ್ ಮುಖ್ಯ ರಸ್ತೆ, ಇನ್‌ಕಮ್ ಟ್ಯಾಕ್ಸ್ ಬಡಾವಣೆ, ವಿಜಯನಗರ ಬೆಂಗಳೂರು - 560040.
E-mail : vijaya_souharda@yahoo.in, vijayasouharda@rediffmail.com

ಸಹಕಾರಿಯು ಸುಸ್ಥಿರ ಬೆಳವಣಿಗೆಯತ್ತ ಸಾಗುತ್ತಿದ್ದು, 28 ಸಂವತ್ಸರಗಳನ್ನು ಮುಗಿಸಿರುವುದು ಸಂತೋಷದಾಯಕ. ನಮ್ಮ ಸಹಕಾರಿಯು ನಿಶ್ಚಿತ ಠೇವಣಿಗಳಿಗೆ ಆಕರ್ಷಕ ಬಡ್ಡಿ ದರವನ್ನು ನೀಡಲಾಗುತ್ತಿದೆ. ಷೇರುದಾರರಿಗೆ ಆಕರ್ಷಣೀಯ ಡಿವಿಡೆಂಡ್ ನೀಡುತ್ತಿದ್ದೇವೆ. ಸಹಕಾರಿಯ ಸದಸ್ಯರಾಗುವ ಮೂಲಕ ವಿವಿಧ ಠೇವಣಿ, ಸಾಲ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಪಿಗ್ಮಿ ಸಂಗ್ರಹಣಾ ವ್ಯವಸ್ಥೆ ಕಲ್ಪಿಸಲಾಗಿದೆ. ಹೊಸದಾಗಿ 01.09.2024 ರಿಂದ ಆವರ್ತ ಠೇವಣಿ(ಖ.ಆ)ಯನ್ನು ಪ್ರಾರಂಭಿಸಿದ್ದು ಹಣ ತೊಡಗಿಸಿದವರಿಗೆ ವಾರ್ಷಿಕ 7% ಬಡ್ಡಿ ನೀಡಲಾಗುವುದು. ಸದಸ್ಯರು ಇವುಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಕೋರಲಾಗಿದೆ.

### ಸಾಲಗಳು

- ಜಾಮೀನು ಸಾಲ : ರೂ. 50,000.00 ದಿಂದ 2,00,000.00 ದವರೆಗೆ 24 ತಿಂಗಳಿನಿಂದ 36 ತಿಂಗಳವರೆಗೆ
- ವಾಹನ ಸಾಲ : 1 ಲಕ್ಷದಿಂದ 10 ಲಕ್ಷ – 24 ತಿಂಗಳಿನಿಂದ 36 ತಿಂಗಳವರೆಗೆ
- ವ್ಯಾಪಾರ ಸಾಲ : 1 ಲಕ್ಷದಿಂದ 20 ಲಕ್ಷ
- ಗೃಹ ನಿರ್ಮಾಣ ಸಾಲ ಮತ್ತು ನಿವೇಶನ ಖರೀದಿ ಸಾಲ : 1 ಲಕ್ಷದಿಂದ 60 ಲಕ್ಷ – 120 ತಿಂಗಳು ಗರಿಷ್ಠ ಅವಧಿ

**ಸಾಲದ ಬಡ್ಡಿ ದರ : 2 ಲಕ್ಷದವರೆಗೆ 13%, 2 ಲಕ್ಷ ಮೇಲ್ಪಟ್ಟು 12%**

2016–17 ರಿಂದ 2019–20 ರವರೆಗೆ ಸತತವಾಗಿ 15% ಹಾಗೂ 2020–2021 ರಲ್ಲಿ 12% ಮತ್ತು 2021 ರಿಂದ 2024 ರವರೆಗೆ 13% 2025 12%

ಸಹಕಾರಿಯ ಪ್ರಗತಿಗೆ ಕೈ ಜೋಡಿಸಿ ಸಹಕಾರಿ ಕ್ಷೇತ್ರದಲ್ಲಿ ಅದ್ಭುತ ಸಾಧನೆಗೆ ನೆರವಾಗಿ.

**ವ್ಯವಹಾರದ ವೇಳೆ :**

| | ಬೆಳಿಗ್ಗೆ | ಸಾಯಂಕಾಲ |
|---|---|---|
| ಸೋಮವಾರದಿಂದ ಶುಕ್ರವಾರದವರೆಗೆ | 9–30 ರಿಂದ 1–30 | 2–00 ರಿಂದ 6–00 |
| ಶನಿವಾರ | 9–30 ರಿಂದ 1–30 | ರಜಾ |
| ಭಾನುವಾರ | ವಾರದ ರಜಾ ದಿನ | |

**2026 – 2031ರ ಸಾಲಿನ ಆಡಳಿತ ಮಂಡಳಿಯ ನಿರ್ದೇಶಕರು**

ಶ್ರೀ ಬಿ. ಸಂತೋಷ್ ಕುಮಾರ್ ಶೆಟ್ಟಿ
ಶ್ರೀ ಕೆ. ಪ್ರಮೋದ್ ಚಂದ್ರ ಭಂಡಾರಿ
ಶ್ರೀ ರವೀಂದ್ರನಾಥ್ ಮಾರ್ಲ
ಶ್ರೀಮತಿ ಹೀರಾ ಅನೂಪ್ ಹೆಗ್ಡೆ
ಶ್ರೀ ಡಿ. ಚಂದ್ರಹಾಸ್ ರೈ
ಶ್ರೀ ಟಿ. ಎನ್ ಶಿವಾನಂದ್ ಶೆಟ್ಟಿ
ಶ್ರೀಮತಿ ಮಂಜುಳಾ ಎಸ್. ಶೆಟ್ಟಿ

ಕಾರ್ಯದರ್ಶಿ : ಶ್ರೀಮತಿ ಶೋಭ ಆರ್.
**ಸ್ಥಾಪಕ ಅಧ್ಯಕ್ಷರು : ದಿ. ಡಾ॥ ಐ. ವಿ. ಶೆಟ್ಟಿ**

ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ
**ಅಧ್ಯಕ್ಷರು**

ಶ್ರೀ ಹೆಚ್. ಶ್ರೀಧರ್ ಹೆಗ್ಡೆ
**ಉಪಾಧ್ಯಕ್ಷರು**

ADVT.


BUNTS' SANGHA R.N.S. EVENING COLLEGE * Bengaluru *
BUNTS' SANGHA RNS
EVENING DEGREE COLLEGE
(Recognised by the Government of Karnataka, Affiliated to Bangalore University)
No. 324, Bunts' Sangha Complex, Chord Road, Vijayanagar, Bengaluru - 560 040.
ADMISSION
OPEN
FOR
B.Com
ACADEMIC YEAR
2026-27
Your Future, Our Commitment!
FINANCIAL ACCOUNTING
Start Your Success Journey With Us!
ABOUT B.Com
The B.Com program builds a strong foundation in commerce, finance, accounting, and business management, preparing you for a successful career in diverse fields.
BUILD YOUR CAREER
ACHIEVE YOUR GOALS
ENDLESS OPPORTUNITIES
LEARN FROM THE BEST
CAREER OPPORTUNITIES
• Accounting & Finance
• Banking & Insurance
• Taxation & Auditing
• Business Management
• Entrepreneurship
• And More...
COURSE HIGHLIGHTS
Experienced Faculty & Student-Centric Learning
Strong Focus on Practical Knowledge
Career Guidance & Placement Support
Digital Learning & Smart Classrooms
Holistic Development & Co-curricular Activities
ENROLL NOW!
+91 82173 65948
LIMITED SEATS – SECURE YOUR FUTURE TODAY!
Student Friendly Environment
Quality Education
Affiliated to Bangalore University
Vijayanagar, Bengaluru
Education Today, Success Tomorrow!

REGISTERED KA/BGW-1589/2A21-2A23 RNI No. : KARBIL/2005/16402, Date of Publication 07-07-2026.
Licenced post without prepayment License No.PMG BG /WPP-219/2A21-2023, Total No.of Pages 20+4=24
Licensed to post at Bengaluru PSO, Mysuru Road, Bengaluru - 560026, on 10th or 12th of every Month




Printed and Published by : Sri Vijay J Shetty Halady. on behalf of Bunts' Sangha Bengaluru.
# 324, Bunts' Sangha Complex, Chord Road, Vijayanagar, Bengaluru - 560 040. Editor : Ravindra Shetty.
Printed at Poornima Printers, # 3 & 4, Sy. No. 51 / 14, Chowdeshwarinagar, Pipe Line Road, Laggere, Bengaluru - 58.
Phone : 080 - 23359588 | 23351210